BUSINESS OF THE HOUSE

Mr. SPEAKER—I am very happy that we have been able to do very good work. The total number of Bills introduced is 14; the number of Bills received from the Joint Select Committee and passed is six; The total is 20.

One resolution under Cotton Rules. The rules of Old Acts replaced for bringing about uniformity is about 72. So far as the work in the House is concerned, I must mention that Hon'ble Members have done very good work. I must certainly congratulate them and I must express my gratitude for the co-operation given.

Sri S. SIVAPPA.—Thank you for your remarks' Sir.

Mr. SPEAKER.—To-day is the last day and we may meet early in February, the date is not yet fixed. With that we may proceed to the regular business of the House.

Sri C. J. MUCKANNAPPA.—Sir, you were promising us to constitute a Committee to revise the Rules. The present Rules have been there for last seven years and there was not a single occasion when we could make use of the provision about adjournment motion. That Rule about adjournment motion is a dead clause. I request the Chair to delete it.

Mr. SPEAKER.—I will consider the question of appointing a committee because, I think, some changes may be necessary; that I will do. Should I do it myself?

Sri B. D. JATTI (Minister for Finance).—In view of the experience, the Chair can suggest some amendments and the House will agree to them.

Mr. SPEAKER.—I want the Members to know it. I do not no whether I have got the power myself even if it is delegated. We will do it early next month.

Now, the resolution which has been under consideration has taken sufficient time. On 7th December 1963, the time allotted was three hours. On 14th December 1963, the time was extended by four hours; on 21st December 1963 time was extended by 2 3/4 hours. Total time consumed eight hours 15 minutes and 21 Members have participated. Balance is one hour and thirty minutes.

NON-OFFICIAL RESOLUTION

Re: Appointment of a committee to investigate into malpractices, etc., prevailing in government, Semi-Government, Administrative and Corporate bodies.

† ಶ್ರೀ ಗೋಪಾಲ ಸಾಲೆನ್ನ (ಮೂಡಬಿದ್ರಿ).—ಸ್ವಾಮಿ, ನಮ್ಮ ಮುಂದೆ ಇರುವ ಶ್ರೀಮಾನ್ ನಂಜಪ್ಪನವರ ನಿರ್ಣಯವನ್ನು ರಾಷ್ಟ್ರದ ಜನತೆಯು ಆರ್ಥಿಕ ಮುಗ್ಗಟ್ಟಿನಲ್ಲಿ ಸಿಕ್ಕಿ ಕಷ್ಟಪಡುತ್ತಿರುವಂಥ ಸಂದರ್ಭದಲ್ಲಿ ತಂದಿರುವುದು ಬಹಳ ಸ್ವಾಗತಾರ್ಹವಾಗಿದೆ ಮತ್ತು ಬಹಳ ವಿಶಾಲವಾದ ತಳಹದಿಯಿಂದ ಅದನ್ನು ಸಭೆಯ ಮುಂದೆ ಸಕಾಲದಲ್ಲಿ ಮಂಡಿಸಲಾಗಿದೆ.

(CHAIRMAN [SMT. BASAVARAJESWARI] IN THE CHAIR)

ಸ್ವಾಮಿ, ಈ ಭ್ರಷ್ಟಾಚಾರ, ಸ್ವಜನ, ಪಕ್ಷಪಾತ ಇವುಗಳನ್ನು ಯಾವ ಅಳತೆಗೋಲಿನಿಂದ ಅಳೆಯುವುದು ಎಂಬುದು ಎಲ್ಲರಿಗೂ ದೊಡ್ಡ ಸಮಸ್ಯೆಯಾಗಿದೆ. ನಮ್ಮ ರಾಷ್ಟ್ರಧುರೀಣರಲ್ಲಿ ಒಬ್ಬರೂ ಮತ್ತು ಮಾಜಿ ರಾಜ್ಯಪಾಲರೂ ಆದ ಶ್ರೀ ಆರ್. ಆರ್. ದಿವಾಕರ್ ಅವರು ಇತ್ತೀಚೆಗೆ ಒಂದು ಲೇಖನದಲ್ಲಿ ಬರೆಯುತ್ತಾರೆ, ಈ ಭ್ರಷ್ಟಾಚಾರವು ಎಷ್ಟರಮಟ್ಟಿಗೆ ಬೆಳೆಯುತ್ತಿದೆ ಎಂದು ಹೇಳಿದರೆ ಅದು ಎಷ್ಟೋ ಹೆಚ್ಚು ಮಹತ್ವವನ್ನು ಪಡೆದು ಅದನ್ನು ಈ ಕಾಲದಲ್ಲಿ ಗುರುತಿಸಲೂ ಕೂಡ ಸಾಧ್ಯವಿಲ್ಲದಷ್ಟುಮಟ್ಟಿಗೆ ಬೆಳೆದಿದೆ. ಅದು ರಾಷ್ಟ್ರದಲ್ಲಿ, ಮುಖ್ಯವಾಗಿ ನಮ್ಮ ದೇಶದಲ್ಲಿ ಹೇಳುವುದಿದ್ದರೆ ಭಯಂಕರ ರಾಕ್ಷಸ ಸ್ವರೂಪವನ್ನು ತಾಳಿದೆ. ಅದನ್ನು ತಡೆಗಟ್ಟಲಿಕ್ಕೆ ಒಂದು ಸಮಿತಿಯನ್ನು, ಕಾಯಿದೆ ಬದ್ಧವಾದ ಸಮಿತಿಯನ್ನು ರಚಿಸಬೇಕು, ಅದನ್ನು ನಿರ್ಮೂಲಗೊಳಿಸಲು ಸಾಧಿಸಬೇಕು ಎಂದು ಈ ನಿರ್ಣಯದಲ್ಲಿ ಶ್ರೀಮಾನ್ ನಂಜಪ್ಪನವರು ಸೂಚಿಸಿದ್ದಾರೆ. ಆದರೆ ಈ ಸಮಿತಿಯನ್ನು ನೇಮಿಸುವುದರಿಂದ ಅದು ನಿರ್ಮೂಲನವಾಗುತ್ತದೆಯೋ, ಅದು ಸಾಧ್ಯವೇ ಎನ್ನುವ ಪ್ರಶ್ನೆ ಬೇರೊಂದು ವಿಷಯ. ಇದೇ ವಿಚಾರದಲ್ಲಿ ಕೇಂದ್ರ ಸಚಿವರಾದ ಶ್ರೀ ನಂದಾ ಅವರು ಈಗಾಗಲೇ ಒಂದು ಮಾತನ್ನು ಹೇಳಿದ್ದಾರೆ, ಎರಡು ವರ್ಷಗಳಲ್ಲಿ ರಾಷ್ಟ್ರದಲ್ಲಿರುವ ಭ್ರಷ್ಟಾಚಾರವನ್ನು ನಾನು ನಿಲ್ಲಿಸಿಬಿಡುತ್ತೇನೆ ಅದು ಸಾಧ್ಯವಾಗದೆ ಇದ್ದರೆ ನಾನು ರಾಜಕೀಯದಿಂದ ನಿವೃತ್ತಿಯಾಗುತ್ತೇನೆ ಎಂದು ಪಣ ತೊಟ್ಟಿದ್ದಾರೆ ಮತ್ತು ಅದನ್ನು ಕಾರ್ಯಗತಗೊಳಿಸಲು ರಾಜ್ಯಗಳ ಮುಖ್ಯಮಂತ್ರಿಗಳನ್ನೂ ಮತ್ತು ಗೃಹಸಚಿವರುಗಳನ್ನೂ ಕರೆಸಿ ಕಾರ್ಯವನ್ನೂ ಆರಂಭಿಸಿದ್ದಾರೆ. ರಾಷ್ಟ್ರಮಟ್ಟದ ಒಂದು ಸಮಿತಿಯನ್ನೂ, ರಾಜ್ಯಮಟ್ಟದ ಸಮಿತಿಗಳನ್ನೂ ಕೂಡ ರಚಿಸಬೇಕೆಂದು ಹೇಳಿದ್ದಾರೆ. ಇದು ಸರ್ಕಾರದ ಆಡಳಿತದಲ್ಲಿರುವ ನೌಕರಶಾಹಿಯೊಳಗಿರುವ ಭ್ರಷ್ಟಾಚಾರಕ್ಕೆ ಮಾತ್ರ, ನಾನು ತಿಳಿದ ಮಟ್ಟಿಗೆ ಅನ್ವಯಿಸುತ್ತದೆ. ನಮ್ಮ ಮುಖ್ಯ ಮಂತ್ರಿಗಳು ಕೂಡ ಇತ್ತೀಚೆಗೆ ದಿಲ್ಲಿಗೆ ಹೋಗಿದ್ದಾರೆ. ಅವರು ಹೇಳಿರುವುದನ್ನು ನೋಡಿದರೆ ಬುದ್ಧಿ ಜ್ಞಾನ ವಿಕಾಸಗೊಂಡಂತೆ ಕಾಣುತ್ತದೆ.

> "The red tape and delay are primarily responsible for the inefficiency and corruption in the administration machinery. Corruption was more in evidence in lower rank of services"

ಎಂದು ಹೇಳುತ್ತಾರೆ. ಇದರಿಂದ ಈಗಶಾನೇ ಜ್ಞಾನೋದಯವಾದಂತೆ ಕಾಣುತ್ತದೆ. ಲೋಯರ್ ರ್‍ಯಾಂಕಿನಲ್ಲಿ ಎಂದರೆ ಜವಾನ, ದಫೇದಾರ, ಅಥವಾ ಗುಮಾಸ್ತ, ಈ ಮಟ್ಟದಲ್ಲಿ ಜಾಸ್ತಿ ಇದೆ ಎಂದು ಹೇಳಿದಂತೆ ಆಗುತ್ತದೆ.

ಸ್ವಾಮಿ, ಈ ಭ್ರಷ್ಟಾಚಾರ ಎಲ್ಲೆಲ್ಲೂ ಇದೆ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಒಂದು ಮಾತನ್ನು ಹೇಳಿದರು. ಇದು ನಮ್ಮಲ್ಲಿ ಇದೆ, ನಿಮ್ಮಲ್ಲಿ ಇದೆ ಎಲ್ಲಾ ಕಡೆ ಇದೆ ಎಂದು ಹೇಳುತ್ತೇನೆ. ಎಲ್ಲಾ ಕಡೆ ಇರತಕ್ಕಂಥ ಭ್ರಷ್ಟಾಚಾರ, ಅನಾಚಾರ ಇದಕ್ಕೆ ಮೂಲಕಾರಣ ಏನು ಎಂಬುದನ್ನು ನಾವು ಮೊದಲು ತಿಳಿದುಕೊಳ್ಳಬೇಕು. ಆಡಳಿತದಲ್ಲಿಯ ಭ್ರಷ್ಟಾಚಾರ ಮೊದಲು ನಿಲ್ಲಬೇಕು. ಇಲ್ಲದಿದ್ದರೆ ಅದು ಬಾಕಿ ಎಲ್ಲಾ ಕಡೆ ಬೆಳೆದು ಹೋಗುತ್ತದೆ. ಆದುದರಿಂದ ಎಲ್ಲರ ಮೇಲೆ ಜವಾಬ್ದಾರಿ ಹೊರಿಸುವುದರಲ್ಲಿ ಅರ್ಥವಿಲ್ಲ. ಪ್ರಜಾಪ್ರಭುತ್ವದಲ್ಲಿ ಆಡಳಿತ ವಹಿಸಿಕೊಂಡಿರತಕ್ಕಂಥ ಸರಕಾರ ಯಾವ ಪಕ್ಷದ ಕೈಯ್ಯಲ್ಲಿ ಇದೆಯೋ ಅಂಥ ಪಕ್ಷದ ನಾಯಕರು ಮತ್ತು ಅವರ ಹಿಂಬಾಲಕರು ಈ ಭ್ರಷ್ಟಾಚಾರದ ಬೆಳವಣಿಗೆಗೆ ಮೂಲ ಕಾರಣರು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಆಡಳಿತ ಭ್ರಷ್ಟಾಚಾರ ನಿಲ್ಲಿಸುವ ಹೊಣೆಗಾರಿಕೆ ವಹಿಸಿಕೊಂಡ ಬಹುಸಂಖ್ಯಾತ ಪಕ್ಷದ ಹೊಣೆಗಾರಿಕೆಯಾಗಿದೆ. ಭ್ರಷ್ಟಾಚಾರ ಅನೀತಿ ದುರ್ಮಾರ್ಗಗಳಿಗೆ ಉಳಿದವರು ಹೊಣೆಗಾರರಲ್ಲ. ಇದರ ನಿರ್ಮೂಲನಕ್ಕೆ ಪಣತೊಟ್ಟು ಧೈರ್ಯದಿಂದ ಮುಂದುವರಿಯಬೇಕು. ಇದನ್ನು ಸರ್ವರೂ ಆಲೋಚನೆ ಮಾಡಬೇಕಾಗಿದೆ. ಯಾವುದೇ ತರಹದ ದಾಕ್ಷಿಣ್ಯಕ್ಕೂ, ಪ್ರಭಾವಕ್ಕೂ ಸರಕಾರ ಒಳಗಾಗಬಾರದು. ಸರಕಾರದ ಅಧಿಕಾರ ಸ್ಥಾನದಲ್ಲಿರುವವರು ಮೊದಲು ತಮ್ಮ ಆತ್ಮಶೋಧನೆ ಮಾಡಿಕೊಳ್ಳುವುದು ಅಗತ್ಯವಾಗಿದೆ. ಯಾಕೆಂದರೆ ಪ್ರತಿಯೊಂದು ಇಲಾಖೆಯಲ್ಲಿ ಭ್ರಷ್ಟಾಚಾರ ಇದೆ. ಇದು ಕೇವಲ ಲೋಯರ್ ರ್‍ಯಾಂಕ್‌ನಲ್ಲಿರುವ

ಸಿಬ್ಬಂದಿಯಲ್ಲದೆ ಬಾಕಿ ಅಧಿಕಾರಿಗಳು ನಿರ್ಮಲರಾಗಿದ್ದಾರೆ ಸ್ವಚ್ಛರಾಗಿದ್ದಾರೆ ಎಂದು ಹೇಳುವುದನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಈ ಭ್ರಷ್ಟಾಚಾರದ ಮೂಲ ಅಧಿಕಾರದಲ್ಲಿರುವಂಥ ಸರಕಾರ ನಡೆಸತಕ್ಕಂಥವರಲ್ಲಿ ಆರಂಭವಾಗಿ ಅದು ಕೆಳಮಟ್ಟದ ಸಿಬ್ಬಂದಿವರೆಗೆ ಇಳಿದುಹೋಗಿದೆ. ಇದರ ನಿವಾರಣೆಗೆ ಒಂದು ಸಮಿತಿ ರಚನೆ ಆಗಬೇಕು. ಇಂಥ ಸಮಿತಿ ರಚನೆಗೆ ಕೇಂದ್ರ ಸರಕಾರ ಸಹ ಒಪ್ಪಿದೆ. ಇಂಥ ಸಮಿತಿಯಲ್ಲಿ ಕೇವಲ ಕೇಂದ್ರ ಸರಕಾರದ ಕೆಲವು ಸದಸ್ಯರು ಇರುವುದು ಸರಿಯಲ್ಲ. ರಾಜ್ಯದ ಮಟ್ಟದಲ್ಲಿ ಸಮಿತಿ ರಚನೆ ಮಾಡಿದರೆ ಪ್ರಯೋಜನವಾಗುವುದಿಲ್ಲ. ಸುಪ್ರೀಂ ಕೋರ್ಟು ಜಡ್ಜುಗಳ ಅಧಿಕಾರ ಇರಬೇಕು. ಅಂಥ ಸಮಿತಿ ಯಾರ ಅಧೀನವಾಗಿರಬಾರದು. ಎಂಟಾಣಿ ಒಂದು ರೂಪಾಯಿ ಲಂಚ ತೆಗೆದುಕೊಳ್ಳುವ ಸಣ್ಣ ಸಣ್ಣ ಅಪರಾಧ ಮಾಡಿದವರನ್ನು ಹಿಡಿದು, ಸಾವಿರಗಟ್ಟಲೆ ಲಕ್ಷಗಟ್ಟಲೆ ಹಣ ದುರುಪಯೋಗ ಮಾಡುವಂಥವರನ್ನು ಬಿಟ್ಟುಕೊಟ್ಟರೆ ಇಂಥ ಸಮಿತಿಯಿಂದ ಏನೂ ಪ್ರಯೋಜನವಾಗುವುದಿಲ್ಲ. ರಾಜ್ಯಕ್ಕೆ ದ್ರೋಹಮಾಡಿದ ಹಾಗೆ ಆಗುತ್ತದೆ. ಆಡಳಿತದಲ್ಲಿ ಇಂದು ದಕ್ಷತೆ ಇಲ್ಲ. ಇದನ್ನು ಸರಕಾರ ಪರ್ಯಾಲೋಚನೆ ಮಾಡಬೇಕಾದುದು ಅಗತ್ಯ. ಸರಕಾರದ ಧೋರಣೆ ಸರಿಯಾಗಿಲ್ಲ. ವಿದ್ಯಾರ್ಥಿಗಳಿಂದ ಫೀಜು ವಸೂಲ್ಮಾಡಲಾಗುತ್ತದೆ. ಆದರೆ ಅವರಿಗೆ ಕೊಡಬೇಕಾದ ಸೌಕರ್ಯ ಒದಗಿಸಿಕೊಟ್ಟಿಲ್ಲ. ಮಕ್ಕಳ ವಿದ್ಯಾಭ್ಯಾಸದ ವಿಚಾರದಲ್ಲಿ ಸರಿಯಾದ ನೀತಿ ಅನುಸರಿಸುತ್ತಿಲ್ಲ. ಅವರ ಯೋಗ್ಯತೆ ಹೆಚ್ಚಿಸುವುದರ ಬದಲು ಅದು ಕೆಳಮಟ್ಟಕ್ಕೆ ಇಳಿಯುತ್ತಿದೆ. ಇದು ಎಲ್ಲರೂ ಒಪ್ಪತಕ್ಕ ವಿಚಾರ. ಶರಾವತಿ, ತುಂಗಭದ್ರ ಮೊದಲಾದ ದೊಡ್ಡ ದೊಡ್ಡ ಯೋಜನೆಗಳಿಗೆ ಬೇಕಾದಷ್ಟು ಹಣ ಖರ್ಚು ಮಾಡಲಾಗುತ್ತಿದೆ. ಅದೇ ರೀತಿ ನಮ್ಮ ರಾಷ್ಟ್ರದ ಮುಂದಿನ ಜನಾಂಗದ ಶಕ್ತಿ ಬೆಳೆಸುವುದಕ್ಕೆ ಏನು ಯೋಚನೆ ಮಾಡಿದ್ದೀರಿ ಎಂದು ಕೇಳುತ್ತೇನೆ. ಇದಕ್ಕೆ ಗಮನ ಕೊಟ್ಟಿಲ್ಲ. ಅನೇಕ ಶಾಲೆಗಳಲ್ಲಿ ಅಧ್ಯಾಪಕರು ಇಲ್ಲ. ಅಧ್ಯಾಪಕರು ಇದ್ದರೆ ಅವರಿಗೆ ಸರಿಯಾಗಿ ಸಂಬಳ ಕೊಡುತ್ತಿಲ್ಲ. ಅಗತ್ಯವಾಗಿರುವ ಸಲಕರಣೆಗಳು ಇರುವುದಿಲ್ಲ. ಆದರೆ ಸ್ಕೂಲ್ ಫೀಜ್ ಹೆಚ್ಚಿಸಿದ್ದೀರಿ. ಇದರಿಂದ ಏನಾಗಿದೆ ಎಂದರೆ ವಿದ್ಯಾರ್ಥಿಗಳು ಸಂಘಟಿತರಾಗಿ ತಮಗೆ ಸವಲತ್ತು ಕೊಡಬೇಕೆಂದು ಸರಕಾರದ ಮುಂದೆ ಬೇಡಿಕೆ ಮಂಡಿಸಿದ್ದಾರೆ. ಈಗ ವಿದ್ಯಾ ಇಲಾಖೆಯಲ್ಲಿ ಒಂದು ರೀತಿ ಕಲುಷಿತ ವಾತಾವರಣ ಉಂಟಾಗಿದೆ. ಇದಕ್ಕೆ ಜವಾಬ್ದಾರರು ಯಾರು ? ಆಡಳಿತ ಜವಾಬ್ದಾರಿ ವಹಿಸಿಕೊಂಡು ಸರಕಾರ ನಡೆಸತಕ್ಕಂಥ ಪಕ್ಷದ ಸದಸ್ಯರ ಮೇಲೆ ಈ ಜವಾಬ್ದಾರಿ ಇದೆ. ಇದಕ್ಕೆ ಬೇರೆಯವರು ಜವಾಬ್ದಾರರಲ್ಲ.

10-30 A. M.

ಇದು ಪ್ರಾರಂಭವಾಗುವುದು ಸಾಮಾನ್ಯ ದಫೇದಾರರಿಂದ ಅಲ್ಲ ಅಥವಾ ಅಲ್ಲಿರುವ ಹೆಡ್ ಗುಮಾಸ್ತನಿಂದ ಅಲ್ಲ. 3-4 ತಿಂಗಳು ಸಂಬಳ ಕೊಡದಿದ್ದರೆ ಅವರು ಹೇಗೆ ಜೀವನ ಮಾಡಬೇಕು ? ಇದರಲ್ಲಿ ಸರ್ಕಾರದ ಜವಾಬ್ದಾರಿ ಇಲ್ಲ ಎಂದು ಯಾವ ರೀತಿಯಲ್ಲಿ ಹೇಳುತ್ತೀರಿ ? ಇನ್ನು ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳನ್ನು ಹಂಚುವುದರಲ್ಲಿ ನ್ಯಾಯ ದೊರಕಿಸಿಕೊಳ್ಳಬೇಕಾದರೆ ಹೈಕೋರ್ಟಿಗೆ ಹೋಗಬೇಕು. ಸಣ್ಣ ಸಣ್ಣ ನೌಕರರು ಅವರ ನೌಕರಿಯಲ್ಲಿ ಪ್ರೊಮೋಷನ್ ಅಗಲಿ, ಬೇರೆ ವಿಧದಲ್ಲಿ ಉದ್ಯೋಗದಲ್ಲಿ ರಕ್ಷಣೆ ಪಡೆದುಕೊಳ್ಳಬೇಕಾದರೆ ಹೈಕೋರ್ಟು ಸುಪ್ರೀಂ ಕೋರ್ಟಿಗೆ ಹೋಗಬೇಕು. ಯಾರಿಗೆ ಹೋಗುವುದಕ್ಕೆ ಅವಕಾಶವಿದೆ ! ಯಾರಿಗೆ ಹಣಕಾಸಿನ ಅನುಕೂಲ ಇದೆ ಅಂತಹವರಿಗೆ ನ್ಯಾಯ ದೊರಕುತ್ತದೆ. ಬೇರೆಯವರಿಗೆ ನ್ಯಾಯ ಸಿಕ್ಕುವುದಿಲ್ಲ. ಇದು ಕರಪ್ಷನ್ ಅಲ್ಲವೇ ? ಇದಕ್ಕೆ ಯಾರನ್ನು ಹೊಣೆ ಮಾಡುತ್ತೀರಿ ! ಇದು ಸರ್ಕಾರದ ಭ್ರಷ್ಟಾಚಾರವಲ್ಲವೇ ! ಇನ್ನು ರಾಜಕೀಯ ಸಂತಸ್ತ್ರರು ಎಂದು ಹೇಳುತ್ತೀರಿ, ಅವರಿಗೆ ಬೇಕಾದಷ್ಟು ರಕ್ಷಣೆ ಕೊಡುತ್ತೀರಿ, ಕೊಡಿ, ಅದನು ನಾವು ಒಪ್ಪುತ್ತೇವೆ, ಅವರು ಕಷ್ಟಪಟ್ಟಿದ್ದಾರೆ. ಈಗ ಅನೇಕ ಜನರು ಯಾವ ರೀತಿ ಯುದ್ಧಕ್ಕೆ ಹೋಗಿ ನೇಫಾ ಗಡಿಯಲ್ಲಿ ಅವರ ಸೇವೆ ಸಲ್ಲಿಸುತ್ತಾ ಇದ್ದಾರೆ ಅದೇ ರೀತಿಯಲ್ಲಿ ರಾಜಕೀಯ ಸಂತಸ್ತ್ರರೂ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು. ಅವರಿಗೆ ರಕ್ಷಣೆ ಕೊಡಬೇಕಾದ್ದು ನ್ಯಾಯ. ಆದರೆ ಯಾರು ನಿಜವಾಗಿ ಕಷ್ಟಪಟ್ಟಿದ್ದಾರೆ, ಯಾರು ಕೈ ಕಾಲು ಮುರಿದುಕೊಂಡಿದ್ದಾರೆ ಯಾರು ಭಿಕ್ಷುಕರಾಗಿ ಜೀವನ ಮಾಡುತ್ತಾ ಇದ್ದಾರೆ ಅಂತಹವರಿಗೆ ಸರ್ಕಾರದ ರಕ್ಷಣೆ ಸಿಕ್ಕದೆ ಯಾರು ರಾಜಕೀಯ ಮುಖಂಡರಾಗಿದ್ದಾರೋ ಅವರ ಸಂಬಂಧಿಗಳಿಗೆ ಮತ್ತು ಅಧಿಕಾರದಲ್ಲಿರುವಂತಹ ಜನರ ಪ್ರಭಾವಕ್ಕೆ ಒಳಪಟ್ಟಂತಹ ಜನಗಳಿಗೆ ಸಿಕ್ಕುತ್ತಾ ಇರುವುದು ಖಂಡಿತವಾಗಿಯೂ ನ್ಯಾಯವಾದುದಲ್ಲ. ಇದಕ್ಕೆ ಬೇಕಾದರೆ ಒಂದು ಕಮಿಷನ್ ಅನ್ನು ನೇಮಕ ಮಾಡಿ, ಆಸ್ತಿಪಾಸ್ತಿಗಳನು ಹೊಂದಿರುವವರು ಎಷ್ಟು ಜನ ಈ ಸೌಲಭ್ಯವನ್ನು ಪಡೆದಿದ್ದಾರೆ ಎಂಬುದನ್ನು ಆಲೋಚನೆ ಮಾಡಲು ಅನುಕೂಲವಾಗುತ್ತದೆ. ಪ್ರಸ್ತುತದಲ್ಲಿ ನಡೆಯುತ್ತಿರುವುದನ್ನು ನೋಡಿದರೆ ಯಾರು ಕೈ ಕಾಲು ಮುರಿದುಕೊಂಡು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜೈಲಿಗೆ ಹೋಗಿ ಕಷ್ಟಪಟ್ಟಿದ್ದಾನೋ ಅವನನ್ನು ಕೇಳುವವರೇ ಇಲ್ಲ. ಯಾರು ರಾಜಕೀಯದಲ್ಲಿ ಮುಂದೆ ಇದ್ದಾರೆ ಯಾರು ದೊಡ್ಡ ದೊಡ್ಡ ಅಧಿಕಾರದಲ್ಲಿ

(ಶ್ರೀ ಗೋಪಾಲ ಸಾರೆನ್ನ)

ದ್ವಾರೆ ಅಂತಹವರು ತಮಗೆ ಬೇಕಾದವರಿಗೆ ರಾಜಕೀಯ ಸಂತಸ್ತ್ರರ ಸೌಲಭ್ಯಗಳನ್ನು ವಿನಿಯೋಗ ಮಾಡಿಕೊಂಡು ಅನುಕೂಲಗಳನ್ನು ಮಾಡಿಕೊಂಡಿದ್ದಾರೆ ಎಂದು ಹೇಳಿದರೆ ಅದರಲ್ಲಿ ತಪ್ಪೇನೂ ಇಲ್ಲ. ಇದಕ್ಕೆ ಸಾಕಾದಷ್ಟು ನಿದರ್ಶನಗಳು ಇವೆ. ಇದು ಭ್ರಷ್ಟಾಚಾರ ಅಲ್ಲವೇ?

ಇನ್ನು ದಲಿತ ವರ್ಗದ ವಿಚಾರ ತೆಗೆದುಕೊಂಡರೆ ಶ್ರೀಮಾನ್ ಮಾದಯ್ಯಗೌಡರು ಹೇಳಿದ್ದಾರೆ, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಎನ್ನುವುದು ಒಂದು ದೊಡ್ಡ ಸುಲಿಗೆಯ ಪರಮಾವಧಿಯಾಗಿದೆ ಎಂದು ಹೇಳಿದರು. ಸ್ವಾಮಿ ಇದು ಅರ್ಥವಿಲ್ಲದ ಮಾತಲ್ಲ.

[MR. SPEAKER in the Chair].

ರಾಷ್ಟ್ರದ ರಾಜ್ಯಾಂಗ ಘಟನೆಯಲ್ಲಿ ದಲಿತ ವರ್ಗದವರಿಗೆ ರಕ್ಷಣೆ ಕೊಡಬೇಕೆನ್ನುವುದು ಪ್ರತಿಯೊಂದು ಸರ್ಕಾರದ ಆದ್ಯ ಜವಾಬ್ದಾರಿ ಮತ್ತು ಕರ್ತವ್ಯವಾಗಿದೆ. ಆದರೆ ಇದನ್ನು ನಿರ್ವಹಿಸುವಾಗ ಇಡೀ ರಾಷ್ಟ್ರದಲ್ಲಿ ಸಮಾಜ ಕಲ್ಯಾಣ ಅಭಿವೃದ್ಧಿ ಯಾವ ರೀತಿ ಆಗಿದೆ ಎಂಬುದನ್ನು ಪರಿಶೀಲನೆ ಮಾಡಲು ಇದಕ್ಕೂ ಒಂದು ಕಮಿಷನ್ ನೇಮಕ ಮಾಡುವುದು ಅತ್ಯಗತ್ಯ ಎಂದು ಹೇಳುತ್ತೇನೆ. ಸಿ ಐ ಡಿ ರೂಪದಲ್ಲಿ ಅಷ್ಟು ಅಧಿಕಾರ ಅವರಿಗೆ ಕೊಡದೇ ಇದ್ದರೂ ಕೂಡ ವಿಷಯಗಳನ್ನು ಸಂಗ್ರಹಿಸಲು ಒಂದು ಸಮಿತಿಯನ್ನು ನೇಮಕ ಮಾಡಿದರೆ ಅದರ ನಿಜಾಂಶ ಸರ್ಕಾರದವರಿಗೆ ತಿಳಿಯುತ್ತದೆ. ಸಮಾಜ ಸಚಿವೆಯರನ್ನು ಕೇಳುತ್ತೇನೆ ಮ್ಯಾಡಂ ಎಷ್ಟು ಜನ ದಲಿತ ವರ್ಗದವರಿಗೆ ಸೆಂಟ್‌ಪರ್ಸೆಂಟ್ ಇತರರಿಗಿರತಕ್ಕ ಅವಕಾಶಗಳನ್ನು ಕೊಡುತ್ತಾ ಇದ್ದೀರಿ? ಸೋಪು ಮುಂತಾದ ಕಾರ್ಖಾನೆಗಳಲ್ಲಿ ತಯಾರಾಗತಕ್ಕ ಸಾಮಾನುಗಳನ್ನು ಮಾರಾಟ ಮಾಡಲು ಏಜೆನ್ಸಿ ಕೊಡುವ ಪದ್ಧತಿ ಇದೆ, ಎಷ್ಟು ಜನಕ್ಕೆ ಏಜನ್ಸಿ ಕೊಟ್ಟಿದ್ದೀರಿ? ಮತ್ತು ಎಷ್ಟು ಜನರನ್ನು ಆರ್ಥಿಕವಾಗಿ ಸ್ವಾತಂತ್ರರನ್ನಾಗಿ ಮಾಡಿದ್ದೀರಿ? ಅನೇಕ ರೀತಿಯ ಪರ್ಮಿಟ್‌ಗಳನ್ನು ಕೊಡುತ್ತೀರಿ ದಲಿತ ವರ್ಗದವರು ಎಷ್ಟು ಜನ ಆ ಅವಕಾಶವನ್ನು ಹೊಂದಲು ಸೌಲಭ್ಯವನ್ನು ಮಾಡಿಕೊಟ್ಟಿದ್ದೀರಿ? ದಲಿತ ವರ್ಗದವರು ಮಂತ್ರಿ ಮಂಡಲಕ್ಕೆ ಬಂದರೂ ಕೂಡ ಅವರಿಗೆ ನ್ಯಾಯ ದೊರಕುತ್ತಾ ಇಲ್ಲ. ಅಂಗಡಿಯಲ್ಲಿ, ಹೊಟೇಲ್‌ನಲ್ಲಿ ಮತ್ತು ಕಬ್ಬಿಣ ಮುಂತಾದುವನ್ನು ಪಡೆಯುವಂತಹ ವಿಚಾರದಲ್ಲಿ ಅವರಿಗೆ ಎಷ್ಟರಮಟ್ಟಿನ ಅವಕಾಶವಿದೆ? ಕೋಳಿ ಕೊಟ್ಟಿದ್ದೇವೆ ಎಂದು ಹೇಳಬಹುದು, ಹಂದಿ ಕೊಟ್ಟಿದ್ದೇವೆ ಎಂದು ಹೇಳಬಹುದು ಸೆನ್‌ಸಸ್ ತೆಗೆದುಕೊಳ್ಳಿ, ಎಷ್ಟು ಕೋಳಿಗಳನ್ನು ಕೊಟ್ಟಿದ್ದೀರಿ, ಅವರು ಎಷ್ಟು ಜನ ಕೋಳಿಗಳನ್ನು ಸಾಕುತ್ತಾ ಇದ್ದಾರೆ, ಎಷ್ಟು ದನಗಳನ್ನು ಕೊಟ್ಟಿರಿ, ಎಷ್ಟು ದನಗಳು ಅವರ ಸ್ವಾಧೀನದಲ್ಲಿ ಇವೆ, ಅವರು ಯಾವ ರೀತಿ ಜೀವನ ಮಾಡುತ್ತಾ ಇದ್ದಾರೆ ಅವರ ಆರ್ಥಿಕ ಸ್ಥಿತಿ ಯಾವ ಮಟ್ಟದಲ್ಲಿ ಇದೆ ಎನ್ನುವುದಕ್ಕೆ ಒಂದು ಸೆನ್‌ಸಸ್ ಮಾಡಿ ವಿಷಯಗಳನ್ನು ಸಂಗ್ರಹಣೆ ಮಾಡಿ. ಆಗ ವಿಷಯಗಳೆಲ್ಲಾ ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದರೆ ನಮಗೆ ಉತ್ತರ ಕೊಡುವಾಗ ಸರ್ಕಾರದವರು ಒಂದು ಇವೇಸೀವ್ ರಿಪ್ಲೆಯನ್ನು ಕೊಡಬಹುದು. ಆದರೆ ದಲಿತವರ್ಗದವರು ನಿಜವಾಗಿಯೂ ಇತರೇಯವರ ಮಟ್ಟಕ್ಕೆ ಬಂದಿದ್ದಾರೆಯೇ ಎಂಬುದನ್ನು ಅವರು ತಿಳಿಸದಿದ್ದರೆ ಇದೂ ಕೂಡ ಒಂದು ರೀತಿಯ ಭ್ರಷ್ಟಾಚಾರವಾಗುವುದಿಲ್ಲವೇ? ಅಂಥಾ ಒಂದು ಅವಕಾಶವನ್ನು ಅವರಿಗೆ ಒದಗಿಸಲಾಗಿದೆ ಎಂಬುದನ್ನು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ತಿಳಿಸಬಲ್ಲರೇ? ಇಂದು ನಮ್ಮ ರಾಜ್ಯದಲ್ಲಿ ಒಂದೊಂದು ಭಾಗದಲ್ಲೂ ಒಬ್ಬರನ್ನೊಬ್ಬರು ತಿನ್ನುವ ಥ ಜನರಿದ್ದಾರೆ.

ಅಧ್ಯಕ್ಷರು.—ಅಂಥವರು ನಮ್ಮ ರಾಜ್ಯದಲ್ಲೆಲ್ಲೂ ಇರುವುದಿಲ್ಲ.

ಶ್ರೀ ಗೋಪಾಲ ಸಾರೆನ್ನ.—ನಾನು ಹೇಳಿದ್ದು ದೊಡ್ಡ ಸ್ಥಾನದಲ್ಲಿರತಕ್ಕ ಜನ ಅವರ ಕೈ ಕೆಳಗಿರತಕ್ಕ ಜನರನ್ನು ವಂಚಿಸುತ್ತಾರೆಂಬ ಅರ್ಥದಲ್ಲಿ ಹೇಳಿದೆ. ಈ ದಿವಸ ಎಷ್ಟೋ ಜನ ಜೈಲಿಗೆ ಹೋಗುತ್ತಾರೆ. ಅವರಲ್ಲಿ ಎಷ್ಟು ಮಂದಿಯನ್ನು ಸಮಾಜ ಕಲ್ಯಾಣ ಇಲಾಖೆಯವರು ಉತ್ತಮ ಮಟ್ಟಕ್ಕೇರಿಸಿದ್ದಾರೆ? ಆ ರೀತಿ ಮಾಡದಿದ್ದರೆ ಈ ಇಲಾಖೆಯವರು ಭ್ರಷ್ಟಾಚಾರಮಾಡಿದಂತೆ ಆಗಲಿಲ್ಲವೇ? ಇಂಥಾ ಒಂದು ಕೆಲಸಕ್ಕಾಗಿ ಯಾವ ಒಂದು ಇಲಾಖೆಯಿದೆಯೋ ಅದು ತನ್ನ ಕರ್ತವ್ಯವನ್ನು ಮಾಡದಿದ್ದರೆ ಅದು ಭ್ರಷ್ಟಾಚಾರಮಾಡಿದಂತಾಗುವುದಿಲ್ಲವೇ? ಹರಿಜನರ ಉದ್ಧಾರಕ್ಕೆಂದಿರತಕ್ಕ ಇಲಾಖೆ ಸರಿಯಾಗಿ ಕೆಲಸಮಾಡದಿದ್ದರೆ ಅದೂ ಭ್ರಷ್ಟಾಚಾರವೇ. ಅಂಥಾ ನಾಮಕಾವಾಸ್ತೆ ಇಲಾಖೆಯಿಂದ ಹರಿಜನರ ಉದ್ಧಾರವಾದಂತಾಯಿತೇ? ಇದನ್ನೆಲ್ಲಾ ಸರಿಪಡಿಸುವುದು ಸಮಾಜ ಕಲ್ಯಾಣ ಸಚಿವರ ಕರ್ತವ್ಯವಲ್ಲವೇ? ಹೀಗೆ ಎಲ್ಲೆಲ್ಲಿ ಸರಿಯಾಗಿ ಕೆಲಸಕಾರ್ಯಗಳು ಆಗಿಲ್ಲವೋ ಅಲ್ಲೆಲ್ಲಾ ಭ್ರಷ್ಟಾಚಾರವಾಗದೇ ಮತ್ತೇನಾಗಿದೆ? ಇವೆಲ್ಲವೂ ಭ್ರಷ್ಟಾಚಾರಕ್ಕೆ ದಾರಿಗಳು, ಶೋನ್ನೆ

ತಾನೇ ಎನ್.ಡಿ.ಸಿ. ಗಳ ಸಮ್ಮೇಳನದಲ್ಲಿ ಹಣಕಾಸಿನ ಸಚಿವರು ಮಾತನಾಡುತ್ತಾ, ನಾವು ದೇಶದಲ್ಲಿ ಕೈಗೊಂಡಿರತಕ್ಕ ದೊಡ್ಡ ದೊಡ್ಡ ಯೋಜನೆಗಳಿಗಾಗಿ ಖರ್ಚುಮಾಡಿರತಕ್ಕ ಹಣಕ್ಕೆ ವರ್ಷ ಒಂದಕ್ಕೆ ಕೊಡಬೇಕಾದ ಬಡ್ಡಿಯೇ 13 ಕೋಟಿ ಆಗುತ್ತದೆ. ಇದನ್ನೆಲ್ಲಾ ಲೆಕ್ಕಾಹಾಕುತ್ತಾ ಹೋದರೆ ಮುಂದೆ ನಿಮಗೆಲ್ಲಾ ಸಂಬಳ ಕೊಡುವುದಕ್ಕೂ ಸಹಾ ದುಡ್ಡು ಉಳಿಯುತ್ತದೋ ಇಲ್ಲವೋ ಗೊತ್ತಾಗುವುದಿಲ್ಲ ಎಂಬುದಾಗಿ ಹೇಳಿದ್ದಾರೆ. ಈ ದಿವಸ ಆ ಕೆಳದರ್ಜೆಯ ನೌಕರರು ಹೊಟ್ಟೆಗೆ ಸಾಲದ ಬಹಳ ಕಷ್ಟದಲ್ಲಿರುವಾಗ ಅವರ ಮುಂದೆ ಇಂಥಾ ಮಾತುಗಳನ್ನು ಹೇಳಿದರೆ ಈ ಲಂಚಾ, ಭ್ರಷ್ಟಾಚಾರಗಳೆಲ್ಲಾ ನಿಂತಹಾಗಾಯಿತೇನು ? ಇಂಥಾ ಹೇಳಿಕೆಗಳಿಂದ ಪರಿಸ್ಥಿತಿ ಇನ್ನೂ ಹದಗೆಡುತ್ತದೆ. ಅವರ ಕುಟುಂಬ ಪೋಷಣೆಗೆ ಸಾಕಾಗುವಷ್ಟು ಸಂಬಳ ಸಾರಿಗೆಗಳನ್ನು ಕೊಡದಿದ್ದರೆ ಅವರು ಜೀವನೋಪಾಯವನ್ನು ನಡೆಸುವುದಾದರೂ ಹೇಗೆ ? ಇದರಿಂದ ಖಂಡಿತ ಭ್ರಷ್ಟಾಚಾರ ನಿಲ್ಲುವುದಿಲ್ಲ. ಸರ್ಕಾರದವರು ಈ ವಿಚಾರವನ್ನು ತೀವ್ರವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಸುಮ್ಮನೆ ಸರ್ಕಾರದವರು ಕಷ್ಟದಲ್ಲಿದ್ದಾರೆ, ಯೋಜನೆಗಳು ಫಲಕೊಡುವುದಕ್ಕೆ ಇನ್ನೂ 10 ವರ್ಷಗಳ ಕಾಲ ಬೇಕೆಂದರೆ ಆ ಬಡ ನೌಕರರ ಹೊಟ್ಟೆ ತುಂಬಿದಂತಾಯಿತೇ ? ಅವರು ಬದುಕಿದಂತಾಯಿತೇ ? ಇಂಥಾ ಮಾತುಗಳಿಂದ ಭ್ರಷ್ಟಾಚಾರ ನಿಲ್ಲುತ್ತದೆಯೇ ? ದಿನವೂ ಗೈಯ್ದು ಕಷ್ಟಪಡತಕ್ಕಂಥ ಜನರ ಕಷ್ಟವನ್ನು ಪರಿಹರಿಸತಕ್ಕ ಮಾರ್ಗ ಇದೇನೇನು ? ನೌಕರ ವರ್ಗದಲ್ಲಿ ದಕ್ಷತೆ ಬೆಳೆಸತಕ್ಕ ಹಾದಿ ಇದೇನೇನು ? ಇದನ್ನೆಲ್ಲಾ ಸರಿಪಡಿಸುವುದು ಸರ್ಕಾರದ ಕರ್ತವ್ಯವಲ್ಲವೇನು ? ನೌಕರರು ಲಂಚಾ ತೆಗೆದುಕೊಳ್ಳುತ್ತಾರೆಂದು ಸುಮ್ಮನೆ ಹೇಳಿದರೆ ಸಾಲದು. ಅವರೇಕೆ ಹಾಗೆ ಲಂಚಾ ತೆಗೆದುಕೊಳ್ಳುತ್ತಾರೆ ? ಅವರಿಗೆ ಸರಿಯಾಗಿ ಹೊಟ್ಟೆಗೆ ಕೊಡದಿರುವುದರಿಂದಲೇ ಅವರು ಲಂಚಕ್ಕೆ ಕೈಚಾಚುತ್ತಿದ್ದಾರೆ. ಒಂದು ಕಡೆ 5000 ರೂಪಾಯಿ ಸಂಬಳ ಇದ್ದರೆ ಇನ್ನೊಂದು ಕಡೆ 50 ರೂಪಾಯಿ ಸಂಬಳ. ಇಂಥಾ ತಾರತಮ್ಯವಿರುವಾಗ ಈ ಇಬ್ಬರ ಅವಶ್ಯಕತೆಗಳಲ್ಲೇನೂ ವ್ಯತ್ಯಾಸವಿರುವುದಿಲ್ಲ, ಇಬ್ಬರ ಅವಶ್ಯಕತೆಗಳೂ ಒಂದೇ ಆಗಿರುತ್ತವೆ. ಹೀಗೆ ಸಾವಿರ ಸಾವಿರ ಗಟ್ಟಲೆ ಸಂಬಳದಲ್ಲಿ ವ್ಯತ್ಯಾಸವಿದ್ದರೆ ಈ ಲಂಚಾ, ಭ್ರಷ್ಟಾಚಾರ ಹೇಗೆ ಹೋಗುತ್ತದೆ ? ಇನ್ನು ಕರ್ಣಾಟಕ ರಾಜ್ಯದ ವಿಚಾರಕ್ಕೆ ಬಂದರೆ : ಈಗ ರಾಜ್ಯ ಒಂದಾಗಿ ಇಡೀ ಕನ್ನಡಿಗರೆಲ್ಲಾ ಒಂದಾಗಿದ್ದೇವೆ. ಆದರೆ ಈ ರಾಜ್ಯಕ್ಕೆ ಒಂದು ಹೆಸರನ್ನಿಡತಕ್ಕ ವಿಚಾರದಲ್ಲಿ ಸರ್ಕಾರ ಹೆದರಿಕೊಂಡು ಕುಳಿತಿದೆ. ನಾವು ಯಾವ ಒಂದು ರಾಜ್ಯಕ್ಕಾಗಿ ಶ್ರಮಿಸಿದೆವೋ ಅಂಥಾ ರಾಜ್ಯ ಸ್ಥಾಪನೆ ಮಾಡಿದ್ದರೂ ಅದಕ್ಕೊಂದು ಹೆಸರನ್ನಿಡುವುದಕ್ಕಾಗದೆ ಸುಮ್ಮನಿರುವುದೂ ಒಂದು ಭ್ರಷ್ಟಾಚಾರವೇ. ಕಾರಣ ಜನ ಅಧಿಕಾರಕ್ಕೆ ಅಂಟಿಕೊಂಡು ಮಾಡಬೇಕಾದ್ದನ್ನು ಮಾಡದೆ ಇದ್ದಾಗ ಅದನ್ನು ಭ್ರಷ್ಟಾಚಾರವೆಂದು ಹೇಳದೆ ಮತ್ತೇನು ಹೇಳಬೇಕು ? ಇದಕ್ಕೆ ಸರ್ಕಾರ ಏಕೆ ಹೆದರಬೇಕು ? ಹೆದರುತ್ತಿರುವುದು ಅಧಿಕಾರದ ಆಸೆಗಾಗಿ. ಅದು ಭ್ರಷ್ಟಾಚಾರ ಅಲ್ಲವೇ ? ಹೀಗೆ ಈ ಭ್ರಷ್ಟಾಚಾರ ಶಬ್ದದ ಅರ್ಥ ಬಹಳ ವಿಶಾಲವಾದದ್ದು. ಇದನ್ನೆಲ್ಲಾ ಸರಿಯಾಗಿ ಶುದ್ಧೀಕರಣಮಾಡಬೇಕಾಗಿದ್ದರೆ ಆಡಳಿತದಲ್ಲಿ ಮೊದಲು ಶುದ್ಧೀಕರಣವಾಗಬೇಕು. ಸರ್ಕಾರ ದಕ್ಷತೆಯಿಂದ ಕೆಲಸ ಮಾಡುವಂತಾಗಬೇಕು. ಹಾಗಾದರೆ ಆಗ ಎಲ್ಲಾ ಭ್ರಷ್ಟಾಚಾರಗಳೂ ತನಗೆ ತಾನೇ ಓಡುತ್ತವೆ. ಇದಕ್ಕಾಗಿ ಸರ್ಕಾರ ಚೆನ್ನಾಗಿ ದುಡಿಯಬೇಕು. ಇಲ್ಲವಾದರೆ ರಾಜ್ಯ ಅಧೋಗತಿಗೆ ಬರುತ್ತದೆ. ಈ ವಿಚಾರದಲ್ಲಿ ನಾನೀ ಸಂದರ್ಭದಲ್ಲಿ ಸರ್ಕಾರದವರಿಗೆ ಒಂದು ಎಚ್ಚರಿಕೆಯನ್ನು ಕೊಡಬಯಸುತ್ತೇನೆ.

† ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು):—ಸನ್ಮಾನ್ಯ ಸಭಾಧ್ಯಕ್ಷರೇ, ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತ ಮತ್ತು ಲಂಚದ ಬಗ್ಗೆ ಏನು ರೆಸಲ್ಯೂಷನ್ನು ಇಲ್ಲಿ ಬಂದಿದೆ ಇದರ ಬಗ್ಗೆ ಈಗಾಗಲೇ ಈ ಸಭೆಯಲ್ಲಿಯೂ ಮಾತನಾಡಿದ್ದಾರೆ ಮತ್ತು ಇತರ ಕಡೆಗಳಲ್ಲಿಯೂ ಜನ ಮಾತನಾಡುತ್ತಿದ್ದಾರೆ. ಇದು ಷುರು ಹೇಗೆ ಆಗುತ್ತದೆ ಎನ್ನುವುದನ್ನು ಮೊದಲು ನೋಡಬೇಕು. ಇದರ ಮೂಲ ಮೊದಲು ಶಾಸನ ಸಭೆಯ ಸದಸ್ಯರನ್ನು ಆರಿಸುವಾಗ ಯಾರನ್ನು ಇದಕ್ಕೆ ಕ್ಯಾಂಡಿಡೇಟರನ್ನಾಗಿ ಮಾಡಿ ಅವರಿಗೆ ಟಿಕೆಟ್ಟು ಕೊಡಬೇಕು ಎನ್ನುವುದರಿಂದ ಷುರುವಾಗುತ್ತದೆ. ಭ್ರಷ್ಟಾಚಾರ ಹಾಗೂ ದುರಾಡಳಿತ ಎನ್ನುವುದಕ್ಕೆ ಬೀಜವನ್ನು ಮೊದಲು ಇಲ್ಲಿ ಬಿತ್ತುವುದರಿಂದ ಇದರ ಬೆಳೆ ಹೇಗೆ ಬರುತ್ತದೆ ಎನ್ನುವುದನ್ನು ತಾವೆಲ್ಲ ಯೋಚನೆ ಮಾಡಬಹುದು.

[Chairman SMT. BASAVARAJESWARI in the chair]

ಆದಕ್ಕಾಗಿ ಯಾವ ಪಾರ್ಟಿಯಲ್ಲಿ ಇಂತಹ ಜನ ಸೇರಬೇಕೆಂದು ಬರುತ್ತಾರೋ ಅಲ್ಲಿ ಒಕ್ಕಲಿಗರು ಇದ್ದಾರೆ ಇಲ್ಲಿ ಲಿಂಗಾಯತರು ಇದ್ದಾರೆ ಎನ್ನುವ ಕೋಮುವಾರು ಭಾವನೆಗಳು ಬಂದು ಅದರಮೇಲೆ ಜನ ಯಾವ ಪಾರ್ಟಿಗೆ ಸೇರಿಕೊಂಡರೆ ಅಲ್ಲಿಗೆ ಚುನಾಯಿತರಾಗಿ ಬರುವವರು ಎಷ್ಟು ಮಟ್ಟಿನ ತ್ಯಾಗ ಮಾಡಬಲ್ಲರು ಎನ್ನುವುದನ್ನು ಮೊದಲೇ ಯೋಚನೆ ಮಾಡುತ್ತಿರುತ್ತಾರೆ. ಮೂಲಭೂತವಾಗಿ ಇಲ್ಲಿಂದಲೇ ಭ್ರಷ್ಟಾಚಾರ ಎನ್ನುವುದು ಷುರುವಾಗುತ್ತದೆ. ಹಾಗೆ ಅಮೇಲೆ ಅವರು

(ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ)

ಚುನಾವಣೆಯಾಗಿ ಪಕ್ಷಕ್ಕೆ ಬಂದಮೇಲೆ ಪಕ್ಷದೊಳಗೆ ಇದ್ದು ಯಾವ ಪಾರ್ಟಿಯಿಂದ ಮೊದಲು ಎಲೆಕ್ಟಾಗಿ ಬಂದಿದ್ದರೋ ಅವರನ್ನು ಆ ಪಾರ್ಟಿಯಿಂದ ಬಿಡಿಸಿ ತಮ್ಮ ಆಡಳಿತ ಪಕ್ಷಕ್ಕೆ ಸೇರಿದರೆ ಅವರಿಗೆ ಒಂದು ಉಪ ಮಂತ್ರಿಗಳ ಪದವಿ ಕೊಡಿಸುತ್ತೇನೆಂದು ಹೇಳಿ ಅವರನ್ನು ಮೆಲ್ಲನೆ ಸೇರಿಸಿ ಕೊಳ್ಳುವುದು ಇದೂ ಒಂದು ತರಹದ ಕರಪ್ಷನ್ನು ಎಂದು ಹೇಳಬಹುದು. ಹಾಗೆ ಮಂತ್ರಿಗಳಾದ ಮೇಲೆ ಅವರಿಗಾಗಿ ಯಾರು ಚುನಾವಣೆಯಲ್ಲಿ ಕೆಲಸಮಾಡಿರುತ್ತಾರೋ ಅವರಿಗೆ ಸಹಾಯ ಮಾಡ ಬೇಕೆನ್ನುವುದು ಒಂದು ರೀತಿಯ ಕರಪ್ಷನ್ನು ಎಂದು ಹೇಳಬಹುದು. ಪಿ. ಎಸ್. ಪಿ ಪಾರ್ಟಿಯಿಂದ ಆಡಳಿತದ ಪಾರ್ಟಿಗೆ ಸೇರಿಸಿಕೊಳ್ಳುವುದು ಒಂದು ರೀತಿಯ ಕರಪ್ಷನ್ನು ಎಂದು ಧಾರಾಳವಾಗಿ ಹೇಳಬಹುದು. ಭ್ರಷ್ಟಾಚಾರ ಯಾವ ರೀತಿ ಹೋಗುತ್ತದೆ ಎನ್ನುವುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಎಷ್ಟಾದರೂ ಇವೊತ್ತು ಎಲೆಕ್ಷನ್ ಕಮಿಷನ್ ಇದೆ ಮತ್ತು ಬೇರೆ ಎಲ್ಲಾ ಇದೆ. ಮತ್ತು ಇದಕ್ಕಾಗಿ ರಾಜ್ಯ ಸರಕಾರ ಸುಮಾರು ಆರೂಕಾಲುಸಾವಿರಕ್ಕಿಂತ ಮೇಲ್ಪಟ್ಟು ಖರ್ಚು ಮಾಡಬಾರದು ಎಂದು ನಿಗದಿಯಾಗಿದ್ದರೂ ಕೂಡ ಅದಕ್ಕಿಂತಮೇಲೆ ಖರ್ಚಾಗುತ್ತಿದೆ. ಸುಮಾರು ಹತ್ತಿಪ್ಪತ್ತು ಜೀಪುಗಳನ್ನು ಒಂದು ಕಂಪೆನಿಯವರು ಒಂದು ಪಾರ್ಟಿಯವರ ಚುನಾವಣೆಗಾಗಿ ಕೊಡುವಾಗ ಅವರು ಮುಂದೆ ಯಾವುದೋ ಒಂದು ರೀತಿಯಾವ ಲೈಸೆನ್ಸು ಅಥವಾ ಒಂದು ಪರ್ಮಿಟು ಹತ್ತಾರು ರೋಡ್‌ಟ್ರಾನ್ಸ್‌ಪೋರ್ಟ್ ಸರ್ವಿಸ್ಸನ್ನು ನಡೆಸಲು ಎಂದು ಕಾಂಗ್ರೆಸ್ಸಿನ ಪಕ್ಷಕ್ಕೆ ಕೊಡುವಾಗ ಯಾವುದೋ ಒಂದು ತರಹದ ದಾಕ್ಷಿಣ್ಯಕ್ಕೆ ಒಳಗಾಗಿ ಮೊದಲು ಕೊಡುತ್ತಾರೆ. ಆದ್ದರಿಂದ ಆ ಪಕ್ಷದವರು ಆಡಳಿತ ನಡೆಸುವಾಗ ಅನೇಕವಾದ ಸೌಲಭ್ಯಗಳನ್ನು ಇಂತಹ ಕಂಪನಿ ಗಳಿಗೆ ಒದಗಿಸಿಕೊಡುವುದು ಸ್ವಾಭಾವಿಕ. ಹೀಗೆ ಒಂದು ರೀತಿಯ ದಾಕ್ಷಿಣ್ಯಕ್ಕೊಳಗಾಗಿ ಮಾಡು ವುದೂ ಒಂದು ರೀತಿಯ ಭ್ರಷ್ಟಾಚಾರ. ಆದುದರಿಂದ ಸರಕಾರ ಇಂತಹ ಯಾವ ದಾಕ್ಷಿಣ್ಯಕ್ಕೂ ಒಳಗಾಗಬಾರದು ಮತ್ತು ಆದಷ್ಟು ಭ್ರಷ್ಟಾಚಾರಗಳನ್ನು ಕಡಿಮೆ ಮಾಡಬೇಕು. ಉದಾಹರಣೆಗೆ ಬೇಕಾದರೆ ತುರುವೇಕೆರೆ ಕ್ಷೇತ್ರದ ಚುನಾವಣೆಯನ್ನೇ ತೆಗೆದುಕೊಳ್ಳಿ. ಅಲ್ಲ ಎಷ್ಟು ಜನ ಸದಸ್ಯರು ಜೀಪುಗಳಲ್ಲಿ ಬಂದರು ಯಾವ ಯಾವ ಕಡೆಗಳಲ್ಲಿ ಮಂತ್ರಿಗಳು ಬಂದು ಅಲ್ಲಿ ಚುನಾವಣೆಗಾಗಿ ಭಾಷಣ ಮಾಡಿದರು ಎನ್ನುವುದರಿಂದ ಭ್ರಷ್ಟಾಚಾರಗಳು ಶುರುವಾಗುತ್ತದೆ. ರಜಾ ತೆಗೆದು ಕೊಂಡು ಬೇಕಾದರೆ ಎಲೆಕ್ಷನ್ನು ಪ್ರಾಪೊಗ್ಯಾಂಡಕ್ಕೆ ಹೋಗಲಿ ಬೇಡವೆನ್ನುವುದಿಲ್ಲ. ಆದರೆ ಮೂರು ಜನ ಮಂತ್ರಿಗಳು ಒಂದೇ ಕಾಲದಲ್ಲಿ ಒಬ್ಬರು ಕಂಬದಳ ಓಪನಿಂಗ್ ಸೆರ್ಮನಿಗೆಂದು, ಇನ್ನೊಬ್ಬರು ಅದರಲ್ಲಿನ ಬಲ್ಬುಗಳನ್ನು ಹಾಕಬೇಕೆಂದು ಮತ್ತು ಒಬ್ಬರು ಬೇರೆ ಯಾವುದೋ ಕೆಲಸಕ್ಕಾಗಿ ಎಂದು ಅಲ್ಲಿಗೆ ಬಂದು ಪ್ರಚಾರ ಭಾಷಣ ಮಾಡಿ ಸರಕಾರಕ್ಕೆ ಬಂದು ಟಿ. ಎ. ಮತ್ತು ಡಿ. ಎ. ಎಂದು ಪಡೆಯುವುದು ಭ್ರಷ್ಟಾಚಾರದ ಕೆಲಸವಲ್ಲವೇ ಹೇಗೆ ಎನ್ನುವುದನ್ನು ತಾವೆಲ್ಲರೂ ಯೋಚನೆ ಮಾಡಿ. 'ತಾಯಿಯಂತೆ ಮಕ್ಕಳು ನೂಲಿನಂತೆ ಶಾಲೆ' ಎನ್ನುವಂತೆ ಈ ಸರಕಾರವಾದರೂ ಇದೆ ಎಂದು ನಾನು ಭಾವಿಸುತ್ತೇನೆ. ತಾಯಿಯಾದವಳು ಸರಿಯಾಗಿದ್ದರೆ ಮಕ್ಕಳೂ ಸರಿಯಾಗಿರುತ್ತವೆ. ಆಡಳಿತ ಪಕ್ಷದಲ್ಲೇ ಇಂತಹ ಅನಾಚಾರಗಳು ಆಗುತ್ತಿದ್ದರೆ ಬೇರೆ ಪಾರ್ಟಿಗಳವರ ಗತಿಯೇನು ? ಇದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ದೇಶದಲ್ಲಿ ಭ್ರಷ್ಟಾಚಾರ ಹೆಚ್ಚುತ್ತಿರುವುದಕ್ಕೆ ಇಲ್ಲಿ ಆಡಳಿತ ದಲ್ಲಿರತಕ್ಕ ಪಕ್ಷವೇ ಕಾರಣ ಎನ್ನುವುದನ್ನು ದೇಶದ ಎಲ್ಲ ಕಡೆಗಳಲ್ಲಿಯೂ ಸಾರ್ವಜನಿಕರಿಂದ ಭಾಷಣಗಳಲ್ಲಿ ಹೇಳುತ್ತಿರುವುದನ್ನು ಎಲ್ಲರೂ ಕೇಳಿರಬಹುದು. ಇದನ್ನು ತಡೆಗಟ್ಟುವುದಕ್ಕೆ ಸಾಧ್ಯ ವಿಲ್ಲ ಎಂದು ಜನ ಹೇಳುತ್ತಿರುವುದನ್ನು ಕೇಳುತ್ತಲೇ ಇರುತ್ತಾರೆ. ಆದರೆ ಇದನ್ನು ಹೇಗೆ ತಡೆಗಟ್ಟ ಬೇಕು ಎನ್ನುವುದರ ಕಡೆಗೆ ಯಾರೂ ಯೋಚನೆ ಮಾಡುತ್ತಿಲ್ಲ. ಇದರ ಬಗ್ಗೆ ಹೇಗೆ ಮಾಡಬಹುದು ಎನ್ನುವುದನ್ನು ಯೋಚನೆ ಮಾಡಬೇಕಾದುದು ಅಗತ್ಯ. ನ್ಯಾಷನಲ್ ಡಿಫೆನ್ಸ್‌ಗಾಗಿ ಎಂದು ಹಣ ವನ್ನು ವಸೂಲಿ ಮಾಡಲು ಶುರುಮಾಡಿದಾಗ ಒಂದು ಸಂದರ್ಭದಲ್ಲಿ ರಶೀತಿಯನ್ನು ಕೊಡದೇ ಹಣ ವನ್ನು ವಸೂಲಿ ಮಾಡಿ ಅದಕ್ಕಾಗಿ ಸರಿಯಾದ ದಾಖಲಾತಿಗಳನ್ನು ಕೊಡದೆ ಫೋರ್ಜರಿ ರಶೀತಿಗಳನ್ನು ಕೊಟ್ಟು ಹಣ ವಸೂಲಾಗಿದೆ ಎಂದಾಗ ಅಲ್ಲಿಗೆ ಸಿ. ಐ. ಡಿ. ಯವರು ಹೋಗಿ ಪರಿಶೀಲನೆ ಮಾಡಿ ಕೊಂಡು ಬಂದಿದ್ದರೂ ಕೂಡ ಅವರು ತಮ್ಮ ಪಕ್ಷಕ್ಕೆ ಸೇರಿದವರೆಂದು ಅವರನ್ನುಳಿಸಲು ಸರಕಾರ ಪ್ರಯತ್ನಿಸುತ್ತಿರುವಂತಾಗಿರುವಾಗ ಭ್ರಷ್ಟಾಚಾರವನ್ನು ತಡೆಗಟ್ಟಲು ಹೇಗೆ ತಾನೇ ನಿಲ್ಲಿಸಲು ಸಾಧ್ಯವಾದೀತು ? ವಿರೋಧ ಪಕ್ಷದವರು ಏನು ತಾನೇ ಮಾಡುತ್ತಾರೆ. ವಿರೋಧ ಪಕ್ಷದವರು ನ್ಯಾಯವಾಗಿ ಮತ್ತು ಸಕಾರಣವಾಗಿರುವ ಯಾವ ವಿಚಾರವನ್ನು ಸರಕಾರಕ್ಕೆ ತಿಳಿಸುತ್ತಿದ್ದರೂ ಕೂಡ ಸರಕಾರ ಅದರಮೇಲೆ ಏನು ಕಾರ್ಯಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಅಲ್ಲದೆ ನಾವು ಶಾಸನ ಸಭೆಯ ಸದಸ್ಯರಾಗಿ ಇಲ್ಲಿ ಎಷ್ಟು ಮಾತನಾಡಿದರೂ ಕೂಡ ಆದರಿಂದೇನೂ ಪ್ರಯೋಜನವಾಗುತ್ತಿಲ್ಲ. ನಾವು ಇಲ್ಲೇ ಎಷ್ಟೋ ಸಾರಿ ಪ್ರಶ್ನೆಗಳನ್ನು ಸರಕಾರಕ್ಕೆ ಕಳುಹಿಸಿ ಅದಕ್ಕೆ ಅವರು ಕೊಡುವ

ಉತ್ತರವನ್ನು ನೋಡಿದರೆ ಅವರು ಯಾವುದೋ ಒಂದು ರೀತಿಯಲ್ಲಿ ನೇರವಾದ ಉತ್ತರ ಕೊಡದೇ ಜಾರಿಕೊಳ್ಳುತ್ತಾರೆ. ಇವೆಲ್ಲಾ ಮೂಲಭೂತವಾದ ಅಬ್ಜಕ್ಷನ್ನುಗಳು ಎಂದು ನಿಮ್ಮ ಪತ್ರಿ ಮಂತ್ರಿಮಂಡಲದವರೇ 29 ಚಾರ್ಜುಗಳನ್ನು ಮಾಡಿದುದು ಭ್ರಷ್ಟಾಚಾರವಲ್ಲವೇ ನೀವೇ ಹೇಳಿ. ಅಲ್ಲದೇ ಇಂತಿಂತಹ ಭ್ರಷ್ಟಾಚಾರದ ಅಪಾದನೆಗಳಾಗಿವೆ ಎಂದು ಪತ್ರಿಕೆಗಳಲ್ಲಿ ಮತ್ತು ಬೇರೆ ಕಡೆ ಗಳಲ್ಲಿ 32 ಚಾರ್ಜುಗಳಾಗಿವೆ ಎಂದು ಒಂದು ಪೇಪರನ್ನೂ ಕೂಡ ಹೊರಡಿಸಿದ್ದರು. ಇವೆಲ್ಲಾ ಭ್ರಷ್ಟಾಚಾರವಲ್ಲವೇ ನೀವೇ ಹೇಳಿ. ನಿಮ್ಮ ಪಕ್ಷದವರಲ್ಲದ್ದವರೇ 29 ಭ್ರಷ್ಟಾಚಾರಗಳಾಗಿವೆ ಎಂದು ಹೇಳಿಕೆ ಕೊಟ್ಟಿದ್ದರೂ ಕೂಡ ಸರಕಾರದ ಕಡೆಯಿಂದ ಅದರ ಬಗ್ಗೆ ಯಾವ ಹೇಳಿಕೆಯನ್ನೂ ಕೊಡಲಿಲ್ಲ. ಇದರಿಂದ ಈಗಿರುವ ಭ್ರಷ್ಟಾಚಾರ ಹಾಗೂ ದುರಾಡಳಿತ ಕಡಿಮೆಯಾಯಿತು ಎಂದು ಹೇಳುವುದಕ್ಕೆ ಸಾಧ್ಯವೇ ಮತ್ತು ಇದರ ಬಗ್ಗೆ ನ್ಯಾಯವಾದ ಸದುತ್ತರವನ್ನೂ ಕೊಡಲಿಲ್ಲ. ಅಲ್ಲದೆ ಈ ಶಾಸನ ಸಭೆಯ ಸದಸ್ಯರೇ ಎಷ್ಟೋ ಅಪಾದನೆಗಳನ್ನು ಮಾಡಿ ಸರಕಾರವನ್ನು ಪ್ರಶ್ನೆ ಕೇಳಿದರೂ ಕೂಡ ಅದಕ್ಕೆ ನೇರವಾದ ಒಂದು ಉತ್ತರವನ್ನೂ ಕೊಡದೇ ಜಾರಿಕೊಳ್ಳುವಂತಹ ಜವಾಬು ಕೊಡು ತ್ತಿದ್ದಾರೆ. ನಾವು ಮಾಡಿರುವ ಅಪಾದನೆಗಳು ಸರಿಯಾಗಿವೆ ಇಲ್ಲ ತಪ್ಪಾಗಿವೆ ಎನ್ನುವುದನ್ನು ಯಾವಾಗ ತಾವು ನೇರವಾಗಿ ಹೇಳಿದ್ದೀರಿ ಯೋಚನೆ ಮಾಡಿ ನೋಡಿ.

11-00 A.M.

As far as possible. ಅದಷ್ಟು ಜಾಗ್ರತೆ ನೋಡುವ ನೋಟೀಸ್ ಅಂತ ನೀವು ಹೇಳು ವುದರಿಂದ ಶಾಸನ ಸಭಾ ಸದಸ್ಯರು ಎಂತಹ ಪ್ರಶ್ನೆಯನ್ನಾದರೂ ಹಾಕಲಿ, ಏನನ್ನಾದರೂ ಗಮನಕ್ಕೆ ತರಲಿ, ಅದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದು ಭಾಸವಾಗುತ್ತದೆ. ಇವತ್ತು ಪಿ. ಡಬ್ಲ್ಯು. ಡಿ.ಗೆ ಸಂಬಂಧಪಟ್ಟ ಒಂದು ಪ್ರಶ್ನೆಗೆ ದೊರೆತ ಉತ್ತರವನ್ನು ತೆಗೆದುಕೊಂಡರೆ ನಮ್ಮ ಆರೋಪಣೆಗೆ ಸಮರ್ಥನೆ ದೊರಕುತ್ತದೆ. ಒಂದು ಕಾಂಗಾರಿಗೆ ಕೊಡಬೇಕಾದ ಹಣವನ್ನು ನೆಗೋಷಿಯೇಷನ್ ಮೂಲಕ ಗೊತ್ತು ಮಾಡಿದ್ದಾರೆ. ಒಂದು ತಾಲ್ಲೂಕು ಆಫೀಸು ಕಟ್ಟಿಸಬೇಕು ಅಂದರೆ ತುರ್ತು ಪರಿಸ್ಥಿತಿ ಬಂದಿದೆ. ಈವಾಗ ಹಣವಿಲ್ಲ ಅಂತ ಹೇಳುತ್ತೀರಲ್ಲ. ಈ ಇಲಾಖೆಯಲ್ಲಿ ಇಷ್ಟು ಹಣ ನೆಗೋಷಿಯೇಷನ್ ಮೂಲಕ ಕಂಟ್ರಾಕ್ಟರಿಗೆ ಹೇಗೆ ಕೊಟ್ಟಿರಿ ? ನೀವು ಟೆಂಡರ್ ಇಲ್ಲದೆ ಒಪ್ಪಂದ ಮಾಡಿಕೊಂಡು ಕೊಡುವುದಾದರೆ ನೀವು ಯಾರಿಗೆ ಬೇಕಾದರೂ, ನಿಮಗೆ ಬೇಕಾದವರಿಗೆ ಇಷ್ಟ ಬಂದ ರೇಟಿನಲ್ಲಿ ಕಂಟ್ರಾಕ್ಟು ಕೊಡಬಹುದು. ಇಷ್ಟೇ ಅಲ್ಲ ಈ ಲೋಕೋಪಯೋಗಿ ಇಲಾಖೆ ಯಲ್ಲಿ ಇನ್ನೊಂದು ವಿಸ್ಮಯ ವಿಷಯ. ಒಂದು ಕಾಂಗಾರಿಯಲ್ಲಿ ಮಣ್ಣನ್ನು ತೆಗೆಯಲು ಕಂಟ್ರಾಕ್ಟ್ ಕೊಟ್ಟರೆ ಅದರಲ್ಲಿ ನೀರು ತೆಗೆಯುವುದೂ ಸೇರದೆ, ಅದೇ ಬೇರೆ ಐಟಮ್ಮಾಗಿ ಪರಿಗಣಿಸಿ ಅದಕ್ಕೆ ಪ್ರತ್ಯೇಕವಾಗಿ ದರ ಗೊತ್ತು ಮಾಡಿ ಹಣ ಕೊಟ್ಟಿದ್ದಾರೆ ಇಂಥ ಕೆಲವು ಐಟಮ್ಮುಗಳನ್ನು ತಮ್ಮ ಗಮನಕ್ಕೆ ಇವತ್ತು ತಂದಿದೆ. ಮಾತುಕತೆಯಲ್ಲಿ ಕಂಟ್ರಾಕ್ಟ್ ಕೊಡುವುದರಿಂದ ನ್ಯಾಯವಾಗಿ ಯಾರಿಗೆ ಕಂಟ್ರಾಕ್ಟ್ ದೊರೆಯಬೇಕೋ, ಯಾರಿಗೆ ಕಾಂಪಿಟೆಂಟ್ ಅಥಾರಿಟೀದು ಶಿಫಾರಸಿರುತ್ತದೋ ಅವರಿಗೆ ಕೆಲಸ ಸಿಗುವುದಿಲ್ಲ. ಕಾರಣವೇನೆಂದರೆ ಫೇವರಿಟಿಸಮ್, ದಾಕ್ಷಿಣ್ಯ ಇವೆಲ್ಲಾ ಬಂದು ಬಿಡುತ್ತವೆ, ಇವುಗಳಿಗೆ ಒಳಗಾಗಿ ಎಷ್ಟು ಐಟಮ್ಮುಗಳಲ್ಲಿ ದರಗಳನ್ನು ಹೆಚ್ಚು ಮಾಡಿ ಹಣ ಕೊಡಿಸಿದ್ದೀರಿ ಕಂಟ್ರಾಕ್ಟರುಗಳಿಗೆ ಅನ್ನುವುದನ್ನು ಯೋಚನೆಮಾಡಿ ಅವರು ಹೇಳಬೇಕು. ಇತ್ತೀಚೆಗೆ ಸಕ್ಕರೆ ಕಂಟ್ರೋಲ್ ಮಾಡಿದ್ದೀರಿ. ಕಂಟ್ರೋಲಿಗೆ ನೀವು ಕೈಹಾಕಿದರೆ ಒಂದು ದೊಡ್ಡ ಅಪಘಾತ ದೇಶಕ್ಕೆ. ನೀವು ಕಂಟ್ರೋಲ್ ಮಾಡದಿದ್ದರೆ ಒಂದು ಆಣೆ ಹೆಚ್ಚು ಕಡಿಮೆ ಬೆಲೆಗೆ ವಸ್ತುಗಳಾದರೂ ಸಿಗುತ್ತವೆ. ಸುಮಾರು ನಾಲ್ಕು ಸಾವಿರ ಮೂಟೆ ಸಕ್ಕರೆಯನ್ನು ಬೆಂಗಳೂರು ಸಿಟಿಯೊಳಗೆ ಕಲ್ಲುಸಕ್ಕರೆ ಮಾಡುವುದಕ್ಕೆ ಕೊಟ್ಟರು, ಜವಳಿ ಅಂಗಡಿಗೆ, ಬೀಡಿ ಸಿಗರೇಟು ಅಂಗಡಿಗೆಲ್ಲಾ, ಕೊಡು ತ್ತಾರೆ. ಈ ಬೀದಿಯಲ್ಲಿರುವ ತನ್ನ ಅಂಗಡಿಗೆ ಒಂದು ಕೋಟ, ಮುಂದಿನ ಬೀದಿಯಲ್ಲಿ ಅಂಗಡಿ ಇಟ್ಟಿರುವ ತನ್ನ ಚಿಕ್ಕಪ್ಪನ ಹೆಸರಿಗೆ ಒಂದು ಕೋಟ, ಹೀಗೆ ನಾಲ್ಕು ಕೋಟವನ್ನು ಕೊಟ್ಟಿದ್ದರು ಹೆಸರುಗಳು ಬೇರೆಯಾದರೂ ಆ ಸಾಮಿ ಒಬ್ಬನೇ. ಅದರಮೇಲೆ ಕೋಟ ಡ್ರಾ ಮಾಡಿದವನಿಗೆ ಏಕೆ ಪ್ರಾಸಿಕ್ಯೂಟ್ ಮಾಡಬಾರದು ಎಂದು ನೋಟೀಸು ಕೊಟ್ಟರು. ಆದಕ್ಕೆ ಅವನು, ಎಲ್ಲಾ ಕೋಟಾ ಗಳಿಗೂ ನಿಗದಿಯಾದ ಹಣ ಕಟ್ಟಿ ತೆಗೆದುಕೊಂಡಿರುವುದರಿಂದ ತನ್ನದೇನೂ ಅಪರಾಧವಿಲ್ಲವೆಂದು ಜವಾಬುಕೊಟ್ಟಿದ್ದಲ್ಲದೆ, ನೋಟೀಸ್ ಕೊಟ್ಟವರಮೇಲೆ ತಾನು ಏಕೆ ಕ್ರಮ ತೆಗೆದುಕೊಂಡು ಕಾಯಿದೆ ಜರುಗಿಸಬಾರದು ಅಂದು ಕೇಳಿದ. ಅಲ್ಲಿಗೆ ಪ್ರಕರಣ ಬಂದ್ ಆಗಿಹೋಯಿತು. ಇದು ಏನು ತೋರಿಸುತ್ತದೆ ಸರಕಾರ ಯಾವುದಕ್ಕಾದರೂ ಕೈಹಾಕಿದರೆ ನಿಷ್ಪಕ್ಷಪಾತವಾಗಿ ಪರಿಶೀಲಿಸಿ ನಿರ್ಣಯಕ್ಕೆ ಬರುವುದಿಲ್ಲ. ಇದರಿಂದ ಸ್ವಜನಪಕ್ಷಪಾತ ಸಾಧಿಸಲು ಅವಕಾಶಕೊಟ್ಟಂತಾಗುತ್ತದೆ.

ದೇಶ ಅಭಿವೃದ್ಧಿಯಾಗಬೇಕಾದರೆ, ದೇಶ ಉಳಿಯಬೇಕಾದರೆ ಸ್ವಜನ ಪಕ್ಷಪಾತದ ಮನೋ ವೃತ್ತಿ ಸರಕಾರದಲ್ಲಿರಬಾರದು. ವಿರೋಧ ಪಕ್ಷದವರು ತಮ್ಮ ಮನೆ ಮುಂದೆ ಬಾವಿ ತೆಗೆಸಿ,

(ಶ್ರೀ ಕೆ. ಪಿ. ರೇವಣಸಿದ್ದಪ್ಪ)

ರಸ್ತೆ ಹಾಕಿಸಿಕೊಡಿ ಎಂದು ಕೇಳುತ್ತಿಲ್ಲ. ಅವರುಗಳು ಪ್ರತಿನಿಧಿಸುವ ಕ್ಷೇತ್ರಕ್ಕೆ ಅವಶ್ಯಕವಾಗಿ ಬೇಕಾದ ಸೌಲಭ್ಯಗಳನ್ನು ಕೇಳಿದರೆ, ಅವನ್ನು ನಿರ್ಲಕ್ಷಿಸುತ್ತಾರೆ. ಹೊಸದುರ್ಗ ತಾಲ್ಲೂಕಿನ ಜನ ಕಾಂಗ್ರೆಸ್ಸಿಗೆ ಓಟು ಮಾಡಲಿಲ್ಲವೆಂದು, ಆ ಊರಿಗೆ ಸೌಕರ್ಯಗಳನ್ನೊದಗಿಸದೆ. ಅಲ್ಲಿಯ ಜನರಿಗೆ ತೊಂದರೆಕೊಟ್ಟು ಛಲ ತೀರಿಸಿಕೊಳ್ಳಬೇಕೆಂದಿದ್ದಾರೆಯೋ? ಈ ತರಹ ವರ್ತಿಸಿದರೆ ಈ ರಾಜ್ಯದಲ್ಲಿ ಡಿಕ್ಟೇಟರ್‌ಷಿಪ್ ಇದೆ ಅನ್ನಬೇಕಲ್ಲವೇ? ಹೀಗೆ ಮಾಡಿದರೆ ಇಲ್ಲಿನ ರಾಜ್ಯಭಾರವನ್ನು ಪ್ರಜಾಪ್ರಭುತ್ವ ಎಂದು ಕರೆಯುತ್ತಾರೆಯೋ?

ಅದು ಹೋಗಲಿ ಮುಖ್ಯಮಂತ್ರಿಗಳಿರಬೇಕು, ತಾವು ಹಣಕಾಸಿನ ಸಚಿವರು ಇರಬೇಕು, ಇರಿ. ಆದರೆ ಕೆಲವು ಉಪಮಂತ್ರಿಗಳು ಖಾತೆ ಇಲ್ಲದೆ ಕೆಲಸವಿಲ್ಲದೆ ಇದ್ದಾರೆ. ಅವರಿಗೂ ಸ್ವಲ್ಪ ಕೆಲಸ, ಜವಾಬ್ದಾರಿ, ಅಧಿಕಾರ ಕೊಟ್ಟು ಅವರಿಂದ ಕೆಲಸ ತೆಗೆದುಕೊಳ್ಳಿ. ಅವರಿಗೆ ಕೆಲಸವಿಲ್ಲದೆ 27 ಜನರನ್ನು ಮಂತ್ರಿಮಂಡಲದಲ್ಲಿ ಕಂಟಿನ್ಯೂ ಮಾಡುವುದೆಂದರೆ ದೇಶಕ್ಕೆ ಬಹಳ ನಷ್ಟ. ಮಂತ್ರಿಮಂಡಳದ ಭದ್ರತೆಯ ದೃಷ್ಟಿಯಿಂದ, ನಿಮಗೆ ಒಗ್ಗೊಟ್ಟುಕೊಂಡು ಇರಲೆಂದು, ಕೆಲವರನ್ನು ಅಂಗರಕ್ಷಕರಂತೆ ಮಂತ್ರಿ ಪದವಿಯಲ್ಲಿಟ್ಟುಕೊಂಡಿರುವುದರಿಂದ ವ್ಯರ್ಥ ಖರ್ಚಾಗುತ್ತಿದೆ. ಅವರಿಗೆ ಮಾಡಲು ಕೆಲಸವಿಲ್ಲವೆಂದಲ್ಲ, ಬೇಕಾದಷ್ಟು ಕೆಲಸವಿದೆ ಕೊಟ್ಟು ಮಾಡಿಸಿ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ರೋಡ್ಸ್, ಬಿಲ್ಡಿಂಗ್ಸ್, ಮೈನರ್ ಇರಿಗೇಷನ್, ದೊಡ್ಡ ದೊಡ್ಡ ಪ್ರಾಜೆಕ್ಟುಗಳು ಆಗುತ್ತಾ ಇವೆ. ಈ ಪ್ರಾಜೆಕ್ಟುಗಳನ್ನು ನೋಡುವುದಕ್ಕೆ ನಮ್ಮನ್ನು ಕರೆದುಕೊಂಡು ಹೋಗುವ ಉತ್ಸವವನ್ನು ಆ ಪರಮಾತ್ಮ ಕಣ್ಣಾರೆ ನೋಡಬೇಕು! ಈ ಒಂದೊಂದು ಚಮತ್ಕಾರವನ್ನೂ ಹೇಳಲು ಸಮಯವಿಲ್ಲ. ಈ ಡೆಪ್ಯುಟಿ ಮಂತ್ರಿಗಳು ಮತ್ತು ಪಾರ್ಲಿಮೆಂಟರಿ ಸೆಕ್ರೆಟರಿಗಳಿಗೆ ಯಾವ ಅಧಿಕಾರವೂ ಇಲ್ಲ. ಈ ಮಧ್ಯೆ, ಪಾಪ, ಅವರಿಗೆ 500-600 ರೂಪಾಯಿ ಬಾಡಿಗೆಯಲ್ಲಿ ಅವರಿಗೆ ತಾತ್ಕಾಲಿಕವಾಗಿ ಇರುವುದಕ್ಕೆ ಮನೆಗಳನ್ನು ಬೇರೆ ಮಾಡಿಕೊಟ್ಟಿದ್ದೀರಿ. ಅವರುಗಳು ಡೀಸೆಂಟಾಗಿ, ಸೊಗಸುಗಾರರಾಗಿಬಿಟ್ಟಿದ್ದಾರೆ. ವಿಧಾನ ಸೌಧಕ್ಕೆ ಅವರ ಆಫೀಸಿಗೆ ಬಂದರೆ ಕೆಲಸಮಾಡಲು ಯಾವ ಖಾತೆಯೂ ಅವರಿಗಿಲ್ಲ. ಮೂರು ನಾಲ್ಕು ಹಳೆಪೇಪರುಗಳನ್ನಿಟ್ಟುಕೊಂಡಿರುತ್ತಾರೆ. ಅವರಿಗೆ ಒಂದು ಫೋನು ಬೇರೆ ಕೊಟ್ಟುಬಿಟ್ಟಿದ್ದೀರಿ; ಅವರು ಅಧೀನರುಗಳಿಗೆ ತಮ್ಮ ಊರಿಗೆ ಇಂಥವನನ್ನು ಟ್ರಾನ್ಸ್‌ಫರ್ ಮಾಡಿ, ಆ ಕಂಟ್ರಾಕ್ಟ್ ವಿಷಯ ಏನು ಮಾಡಿದಿರಿ, ಎಂದು ಫೋನ್ ಮೂಲಕ ಬೇಡುತ್ತಿರುತ್ತಾರೆ. ಈ ಉಪಮಂತ್ರಿಗಳ ಪಾಡನ್ನು ನೋಡಿದರೆ ಬಹಳ ಸಂಕಟವಾಗುತ್ತಿದೆ. ಅವರು ಮಂತ್ರಿಗಳ ಸ್ಟೇಟಸ್ ಮೇಂಟೇನ್ ಮಾಡುವುದಕ್ಕೆ 600-700 ರೂಪಾಯಿನ ಬಾಡಿಗೆ ಮನೆಗಳನ್ನು ಮಾಡಿಕೊಟ್ಟಿದ್ದೀರ. ಕಾರುಗಳೂ ಇವೆ, ಇಬ್ಬರಿಗೆ ಸೇರಿಸಿ ಒಂದು ಕಾರು ಇದೆ ಅಂತ ಕಾಣುತ್ತೆ. ಅವರುಗಳು ಟೂರ್ ಹೋದಾಗ ಅರ್ಜಿ ಕೊಟ್ಟರೆ, ನಮ್ಮಂತೆಯೇ ಅವರೂ ಅದನ್ನು ಸಂಬಂಧಪಟ್ಟವರಿಗೆ ಫರ್ವಾರ್ಡ್ ಮಾಡುತ್ತಾರೆ. ಆ ಅರ್ಜಿಗೆ ಉತ್ತರ ಬಂತೆ, ಅದು ಕಾರ್ಯಗತವಾಯಿತೆ ಅನ್ನುವುದೂ ಅವರಿಗೆ ಗೊತ್ತಾಗುವುದಿಲ್ಲ. ಅವರು ನೋಡುವ ಹಾಗೂ ಇಲ್ಲ. ಇಂಥ ಅವಸ್ಥೆಯಲ್ಲಿದ್ದಾರೆ ಅವರು. ಅವರುಗಳೇನು, ಇದ್ದರೆ 2-3 ವರ್ಷ ಮಂತ್ರಿಯಾಗಿರುತ್ತಾರೆ, ಅವರುಗಳೇನು ತುಂಬ ಸಾಹುಕಾರರೂ ಅಲ್ಲ, ಎಲ್ಲಾ ತಾಪತ್ರಯವಿರುವವರೇ. ಸರಕಾರ ಅವರಿಗೆ ಒಂದು ಕೆಟ್ಟ ಅಭ್ಯಾಸ ಕಲಿಸುತ್ತದೆ. ಅದೇನೆಂದರೆ ಮಾತೆತ್ತಿದರೆ, ಮಂತ್ರಿ ಪದವಿ ಹೋದಮೇಲೆ, ನಾನು ಮಂತ್ರಿಯಾಗಿದ್ದೆ, ನಾನು ಮಂತ್ರಿಯಾಗಿದ್ದೆ ಎಂದು ಹೇಳುತ್ತಲೇ ಇರುವುದು. ಮತ್ತೆ ನಿಜಲಿಂಗಪ್ಪನವರ ಸರಕಾರ ಹೋಗಿಬಿಟ್ಟರೆ, ಇವರುಗಳು ನಾಳೆ ಮನೆಗೆ ಹೋಗಬೇಕು. ಆಮೇಲೂ ಇವರು "ನಾನು ಮಂತ್ರಿ, ನಾನು ಮಂತ್ರಿ" ಎಂದು ಹಂಬಲಿಸುತ್ತಾರೆ, ಆವಾಗ ಹುಡುಗರು ಎಲ್ಲೋ ಹುಚ್ಚ ಎಂದು ಕಲ್ಲೆಸೆಯುತ್ತಾರೆ. ಇವರಿಗೆ ಕೆಲಸ ಹೋಗಿಬಿಟ್ಟರೆ, ಹುಚ್ಚಾಸ್ಪತ್ರೆ ಎಕ್ಸ್‌ಟೆಂಡ್ ಮಾಡಬೇಕಾಗುತ್ತದೆ. ಇವರಿಗೆ ಮಂತ್ರಿ ಪದವಿ ಹೋದರೆ ಚಿತ್ತವಿಭ್ರಮೆಯಾಗುತ್ತದೆ. ಮಂತ್ರಿ ಪದವಿ ರುಚಿ ಕಂಡಿರುವುದರಿಂದ, ಅದನ್ನು ಕಳೆದುಕೊಂಡಮೇಲೆ ಅದರ ವ್ಯಾಮೋಹ ಹೋಗುವುದಿಲ್ಲ ಆವಾಗ ಹುಚ್ಚರಾಗಿಬಿಡುತ್ತಾರೆ. ಆಗ ಹುಚ್ಚರಾಸ್ಪತ್ರೆಯಲ್ಲಿ ಜಾಗವಿಲ್ಲದೆ, ಹುಚ್ಚರ ಆಸ್ಪತ್ರೆಗಳನ್ನು ಈ ತಾತ್ಕಾಲಿಕ ಹುಚ್ಚರಿಗಾಗಿ ಜಾಸ್ತಿ ಮಾಡಬೇಕಾಗುತ್ತದೆ.

ಸಭಾಪತಿಯವರು.—11½ ಗಂಟೆಗೆ ಮಿನಿಸ್ಟರು ರಿಪ್ಲೈ ಕೊಡುತ್ತಾರೆ. ಅದಕ್ಕೆ ಮುಂಚೆ ಇನ್ನೂ ಇಬ್ಬರು ಮಾತನಾಡುವವರಿದ್ದಾರೆ. ಆದಷ್ಟು ಬೇಗ ಮುಗಿಸಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅವರು ಉತ್ತರ ಕೊಡುವುದು ಗೊತ್ತಿದೆ. ಯಾರಿಗೂ ಸಿಕ್ಕದ ಹಾಗೆ, ಜಾರಿಕೊಂಡು ಹೋಗುತ್ತಾರೆ.

ಬೇಕಾದರೆ ಇನ್ನೂ 4-5 ಜನ ಮಂತ್ರಿಗಳನ್ನು ತೆಗೆದುಕೊಳ್ಳಲಿ. ಅದರಿಂದ ದೇಶಕ್ಕೆ ಲುಕ್ಸಾನು ಏನೂ ಆಗುವುದಿಲ್ಲ. ಅವರಿಂದ ಸರಿಯಾದ ಕೆಲಸ ಕೇಳಬೇಕು ಎಂದು ತಮ್ಮಲ್ಲಿ ಸವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ಸರಕಾರ ಉಳಿಯಬೇಕು, ದೇಶ ಉಳಿಯಬೇಕು, ನ್ಯಾಯ ದೊರಕಬೇಕೆಂದರೆ, ಈ ತರಹ ಹಣ ಇವರು ಖರ್ಚು ಮಾಡಿದರೆ ಆಗುವುದಿಲ್ಲ. ನಾವು ಯಾವುದಕ್ಕೆ ಗ್ರಾಂಟು ಕೇಳಿದರೂ ಇಲ್ಲ ಅನ್ನುತ್ತಾರೆ. ಆದರೆ ಪಿ. ಡಬ್ಲ್ಯು. ಡಿ. ಯಲ್ಲಿ ನೋಡಬೇಕು. ಒಂದೊಂದು ರೋಡಿಗೆ 125 ಜೂನಿಯರ್ ಇಂಜನಿಯರು, 25 ಅಸಿಸ್ಟೆಂಟ್ ಇಂಜನಿಯರು, 3 ಜನ ಎಕ್ಸಿಕ್ಯೂಟೀವ್ ಇಂಜನಿಯರು, ಒಬ್ಬ ಸೂಪರಿಂಟೆಂಡಿಗ್ ಇಂಜನಿಯರು ಇಷ್ಟೆಲ್ಲಾ ಇದ್ದು ಕಂಟ್ರಾಕ್ಟರುಗಳಿಗೆ ಕೊಟ್ಟ ಮೆಷಿನರಿಗಳು ಉಪಯೋಗಿಸಲ್ಪಟ್ಟಿರುವುದಿಲ್ಲ. ಇಷ್ಟು ಜನ ಇದ್ದೂ ಕಂಟ್ರಾಕ್ಟರುಗಳಿಗೆ ಹಣ ಸಾಲ ಕೊಡಬೇಕು. ಈ ರೀತಿ ದೇಶಕ್ಕೆ ಅನ್ಯಾಯವಾಗುತ್ತಿರುವುದನ್ನು ತಡೆಗಟ್ಟಬೇಕು.

ಸಮಯವಿಲ್ಲದಿರುವುದರಿಂದ ಮತ್ತೊಮ್ಮೆ ಆರ್ಥಿಕ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ತಾವು ಉತ್ತರ ಕೊಡುವಾಗ ತಮ್ಮ ಮಂತ್ರಿ ಮಂಡಲವಿದ್ದಾಗ, ತಮ್ಮ ಮೇಲೆ ಕಾಂಗ್ರೆಸ್ ಶಾಸಕರು ತಂದಿದ್ದ 29 ಚಾರ್ಜುಗಳ ಬಗ್ಗೆಯೂ, ತಾವು ಮುಖ್ಯ ಮಂತ್ರಿಯಾಗುವುದಕ್ಕೆ ಮುಂಚೆ ಇದ್ದ ಚೀಫ್ ಮಿನಿಸ್ಟರ ಮೇಲೆ ಮಾಡಿದ ಚಾರ್ಜುಗಳ ಬಗ್ಗೆಯೂ, ಚುನಾವಣೆಗೆ ಕಾಂಗ್ರೆಸ್ ಟಿಕೇಟ್ ಕೊಡುವಾಗ ಮಾಡಿದ ಕುಯುಕ್ತಿ, ಭ್ರಷ್ಟಾಚಾರಗಳ ಬಗ್ಗೆಯೂ ದಯವಿಟ್ಟು ಆಪ್ಪಣೆ ಕೊಡಿಸಬೇಕು. ಬೆಲ್ಲ ಮಾಡುತ್ತಾರೆಂದು ಕೆಲವು ನೀರ ಕೇಂದ್ರಗಳನ್ನು ಕೊಟ್ಟು ಬಿಟ್ಟಿದ್ದೀರ. ಅಲ್ಲಿ ಬೆಲ್ಲವೂ ಇಲ್ಲ ಸುಡುಗಾಡೂ ಇಲ್ಲ. ಇದೇ ಅಸೆಂಬ್ಲಿಯಲ್ಲಿ ನಾನು ಅಲ್ಲಿ ಬೆಲ್ಲ ಮಾಡುತ್ತಿಲ್ಲ. ನನ್ನ ಜೊತೆ ಬನ್ನಿ ತೋರಿಸಿ ಕೊಡುತ್ತೇನೆ, ನೀವು ಹೇಳುತ್ತಿರುವುದೆಲ್ಲಾ ಸುಳ್ಳು ಎಂದು ಚಾಲೆಂಜ್ ಮಾಡಿ ಹೇಳಿದ್ದೇನೆ. ಅಷ್ಟೇ ಅಲ್ಲ, ನಾನು ಹೇಳುವುದನ್ನು ತೋರಿಸದಿದ್ದರೆ, ಅಧ್ಯಕ್ಷರಿಗೆ ರಾಜೀನಾಮೆ ಕೊಟ್ಟು ಹೋಗಿರುತ್ತೇನೆ, ಅದನ್ನು ಅಂಗೀಕಾರ ಮಾಡಿಕೊಳ್ಳಲಿ ಅಂತ ಈ ಸಭೆಯಲ್ಲಿ ಅರಿಕೆ ಮಾಡಿಕೊಂಡಿದ್ದೇನೆ. ಈ ನೀರಾ ಕೇಂದ್ರಗಳ ಬಗ್ಗೆ ನಾನು ಹೇಳುವುದರಲ್ಲಿ ನ್ಯಾಯ ಸತ್ಯವಿದ್ದರೆ, ಸರಕಾರ ತಿದ್ದಿಕೊಳ್ಳಲಿ, ಸರಿಮಾಡಿಕೊಳ್ಳಲಿ.

†**Sri P. F. D'MELLOW** (Nominated).—Madam, so much already been said on the resolution. There is not much on my part to add to it. But, my fear derives from my professional background, the fear that we perhaps bestow a great deal of attention on possible remedies without trying to get to correct diagnsois of the causes that has resulted in what is now been truly described as a cancer that is destroying the very nation. I am aware that the resolution before the House deals with the specific aspect of corruption as understood in official circles. The debate is only the part of the story. We have heard so many opinions as to the remedies and causes.

We have heard our own Chief Minister—if correctly reported—saying that it was his view that red-tape and delays are primarily responsible for inefficiency and corruption He quite rightly suggested that he would bestow his attention on removing whatever serves as a bottleneck. We have also heard the Hon'ble Home Minister of the Central Government opine that corruption was behaving, as he put it, like white ants, eating into the very vitals of society. He proposes, with his intimate knowledge of things at the Centre, to deal with persons both high and low. He suggested that perhaps one of the main reasons was that the public may not associate more closely with measures that he sought to apply to correcting what he chose to call "this cancer". The Hon'ble Home Minister at the Centre, I understand-and his proposal, it will appear, has also been accepted by our own Chief Minister,—prophses to constitute what he calls 'Vigilance Commissions'. The difficulty of course would arise, if considerable thought is not bestowed, in respect of both the personnel to be selected or nominated

(SRI P. F. D'MELLOW)

and the terms of reference of these commissions. My own mind takes me a little deeper. It is with a view to making a suggestion and letting a little thought in directions that perhaps have been overlooked. To my mind, if we are over to eradicate corruption—which is after all not eculiar to this country but is to be found in almost all pcountries of the world today—if we are to apply ourselves to correcting what really confronts us, I submit with all respect to our leaders, that we must look deeper, we must go right back to our schools and our system of education. We must try and inject into our educational system, suitable correctives, because it is there we are creating what the future is in store. If we look around us to day and if we see growing indiscipline in our school population, if we see discontent and hardship complained of in our teaching staff, we must readily conclude that with germs of that nature, the disease must spread in later life. Therefore my plea today is short and simple: I say that while it is of course correct for Government, in terms of the present resolution, to concern themselves with correctives at the administrative levels, to ensure the removal of everything that tends to perpetuate or to generate corruption, I plead that these Vigilance commissions when created have on them a sufficient number of educationalists, so that it is not so much as punishing a man-the ordinary processes of law could do that-but it is a question of correcting things at the base, that is, in our educational institutions.

Finally, before I sit down, I would suggest that if we are really serious about this problem, some serious thought might be bestowed on the proposal to create a Central Educational Service. Yes, I know that States are very jealous of their peroragatives and their autonomy on the subject of education but I believe that it is in the surprisingly strange avenues, we must search if we want to eradicate this disease. For this purpose, I suggest the creation of a Central Educational Service would be one of the best means.

† ಶ್ರೀ ವೀರಭದ್ರಪ್ಪ ಈರಪ್ಪ (ಯಲಬುರ್ಗ).—ಮಾನ್ಯ ಸಭಾಪತಿಗಳೇ, ಇವತ್ತಿನ ದಿವಸ ಈ ಖಾಸಗಿ ನಿರ್ಣಯದ ಮೇಲೆ ನಾನೂ ಕೂಡ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಈಗ ನಮ್ಮ ರಾಜ್ಯದಲ್ಲಿ, ನಮ್ಮ ದೇಶದಲ್ಲಿ ಭ್ರಷ್ಟಾಚಾರ ಮತ್ತು ವಶೀಲಿಬಾಜಿ ವಿಶೇಷವಾಗಿದೆ. ಇದರ ಬಗ್ಗೆ ಕೇಂದ್ರ ಸರ್ಕಾರದವರು ಕೂಡ ಇದನ್ನು ಹೇಗೆ ನಿರ್ಮೂಲನೆ ಮಾಡಬೇಕು ಎನ್ನುವುದನ್ನು ವಿಚಾರ ಮಾಡಲಿಕ್ಕೆ ಹೊರಟಿದ್ದಾರೆ. ಆದರೆ ನಮ್ಮಲ್ಲಿ ಭ್ರಷ್ಟಾಚಾರ, ಲಂಚಕೋರತನ ಇವು ಹೇಗೆ ಬೆಳೆಯಲಿಕ್ಕೆ ಹತ್ತಿವೆ ಎನ್ನುವುದಕ್ಕೆ ಮೂಲಕಾರಣವನ್ನು ನಾವು ಹುಡುಕಬೇಕಾಗಿದೆ. ಅದಕ್ಕೆ ಒಂದು ಕಮಿಟಿಯನ್ನು ನೇಮಿಸಬೇಕು ಎನ್ನುವುದೇ ಈ ಠರಾವಿನ ಮೂಲ ಉದ್ದೇಶ.

ಸ್ವಜನ ಪಕ್ಷಪಾತ, ಲಂಚಕೋರತನ, ಎಲ್ಲಿ ಬರುತ್ತದೆ ಎನ್ನುವುದನ್ನು ಸ್ವಲ್ಪ ಆಲೋಚನೆ ಮಾಡಿದಾಗ ಒಂದು ವಿಚಾರ ಗೊತ್ತಾಗುತ್ತದೆ. ಏನೆಂದರೆ ನಮಗೆ ಬೇಕಾದಂಥ ಅವಶ್ಯ ಕೆಲಸಗಳನ್ನು ಮಾಡಿಸಿಕೊಳ್ಳುವಾಗ ಎಲ್ಲಿಯಾದರೂ ಹೋದ ವೇಳೆಯಲ್ಲಿ ಆತುರತೆಗೆ ಬಿದ್ದು ಆ ಕೆಲಸವನ್ನು ಸಾಧಿಸಿಕೊಳ್ಳುವುದಕ್ಕೆ ಬಹಳ ಪ್ರಯತ್ನ ಮಾಡುತ್ತೇವೆ. ಆ ಹೊತ್ತಿನೊಳಗೆ ಸ್ವಾರ್ಥ ಮತ್ತು ವಶೀಲಿಬಾಜಿ, ಹಾಗೂ ಲಂಚಕೋರತನ ಬರುತ್ತದೆ. ಯಾವುದೇ ಕಛೇರಿಯಲ್ಲಿ ಒಬ್ಬ ಅರ್ಜಿ ಕೊಟ್ಟರೆ ಅಲ್ಲಿಯ ಅಧಿಕಾರಿಗಳು ಸಂಬಂಧಪಟ್ಟವರನ್ನು ಕರೆಸಿ ಅದಕ್ಕೆ ಸಂಬಂಧಿಸಿದ ಫೈಲನ್ನು ತರಿಸಿ, ಅದನ್ನು ವಿಚಾರ ಮಾಡಿ ತೀರ್ಮಾನ ಮಾಡಿದರೆ ಮುಂದೆ ಲಂಚ ಕೊಡುವುದಕ್ಕೆ ಆಸ್ಪದವಿರುವುದಿಲ್ಲ. ಆದರೆ ಅಧಿಕಾರಿಗಳು ಅರ್ಜಿಯನ್ನು ತೆಗೆದುಕೊಂಡು ಬೇರೆ ಯಾರ ಕಡೆಗಾದರೂ ಕಳಿಸಿದರೆ ಅಲ್ಲಿ

ದಿವಸ, ಇನ್ನೊಂದು ಕಡೆ 15ದಿವಸ ಹೀಗೆ ತಡವಾಗುವುದರಿಂದ ಆ ಕೆಲಸವನ್ನು ಬೇಗ ಮಾಡಿಸಿ ಕೊಳ್ಳಬೇಕೆಂಬ ಆತುರದಿಂದ ಲಂಚ ಕೊಟ್ಟು ಕೆಲಸ ಮಾಡಿಸಿಕೊಳ್ಳುವ ಪ್ರಸಂಗ ಬರುತ್ತದೆ. ಇದ ರಿಂದಾಗಿ ಅಧಿಕಾರಿಗಳಲ್ಲಿ ಮತ್ತು ಸಾರ್ವಜನಿಕರಲ್ಲಿ ಕೂಡ ಈ ಮನೋವೃತ್ತಿ ಬೆಳೆಯುತ್ತಿದೆ. 1947ರಲ್ಲಿ ನಮ್ಮ ಜನರಲ್ಲಿದ್ದ ನೈತಿಕ ಮಟ್ಟ ಈ 16ವರ್ಷಗಳಲ್ಲಿ ಕಡಮೆಯಾಗುತ್ತಿದೆ. ಯಾರು ಏನೇ ಆಗಲಿ, ದೇಶ ಏನೇ ಆಗಲಿ, ನಾನು ನಾಲ್ಕು ದುಡ್ಡು ಮಾಡಿಕೊಳ್ಳಬೇಕು ಎನ್ನುವ ಮನೋ ವೃತ್ತಿ ನಮ್ಮಲ್ಲಿ ಬೆಳೆಯುತ್ತಿದೆ. ಅದರ ಬಗ್ಗೆ ಕೆಲವೊಂದು ಉದಾಹರಣೆಗಳನ್ನು ಇಲ್ಲಿ ಕೊಡುವು ದಕ್ಕೆ ಪ್ರಯತ್ನ ಮಾಡುತ್ತೇನೆ.

ಈಗ ಎರಡು ವರ್ಷದ ಹಿಂದೆ ಕೊಪ್ಪಳದಲ್ಲಿ ಒಂದು ಸಮಾರಂಭ ನಡೆಯಿತು. ಅದಕ್ಕೆ ಸಾರ್ವ ಜನಿಕರಿಂದ ಬೇಕಾದಷ್ಟು ದುಡ್ಡನ್ನು ಸಂಗ್ರಹಿಸಿದರು. ಸರ್ಕಾರದವರು ಕೂಡ ಹಾಲಿನ ಪುಡಿ ಒದಗಿಸಿಕೊಟ್ಟರು. ಅಲ್ಲಿಯ ಕೆಲಸಕಾರ್ಯಗಳೇನು, ಸಂಗ್ರಹ ಮಾಡಿದ ಹಣವನ್ನು ಹೇಗೆ ಉಪಯೋಗ ಮಾಡಿದರು ಎಂದು ಕೇಳುವುದಕ್ಕೆ ಪ್ರಯತ್ನಮಾಡಿಲ್ಲ. ನಾವು ಸರ್ಕಾರಕ್ಕೆ ಒಂದು ಮನವಿಯನ್ನು ಕೂಡ ಕಳಿಸಿಕೊಟ್ಟೆವು. ಅದರ ಬಗ್ಗೆ ಇನ್ನೂ ವಿಚಾರಣೆ ಮಾಡಿಲ್ಲ. ನಾವು ಸರ್ಕಾರಕ್ಕೆ ಬರೆದು ಮೂರು ತಿಂಗಳಾಗಿದ್ದರೂ ಇದನ್ನು ನೋಡಿಲ್ಲ. ಇದು ಸ್ವಜನ ಪಕ್ಷಪಾತ ಇರಬಹುದು ಎಂದು ನಾನು ಭಾವಿಸುತ್ತೇನೆ.

ಯಲಬುರ್ಗದಲ್ಲಿ ಒಂದು ನಾಟಕವನ್ನು ಆಡಿಸಿ ಲಕ್ಷಾಂತರ ರೂಪಾಯಿ ಸಂಗ್ರಹಿಸಿದರು. ಅದರೊಳಗೆ ಸಾಧಾರಣ ನಾಲ್ಕಾರು ಸಾವಿರ ರೂಪಾಯಿಗಳನ್ನು ಕೆಲವರು ತಿಂದುಹಾಕಿದ್ದಾರೆ. ಅದರ ಬಗ್ಗೆ ವಿಚಾರಣೆ ಮಾಡಬೇಕೆಂದು ಅಲ್ಲಿಯ ಜನ ಸರ್ಕಾರವನ್ನು ಕೇಳಿಕೊಂಡರು. ಮೂರು ತಿಂಗಳಾದರೂ ಕೂಡ ಅದು ಸರ್ಕಾರದ ಕಡೆಗೇ ಇದೆ. ವಿಚಾರಣೆ ಮಾಡಿಲ್ಲ.

ರಾಯಚೂರು ಜಿಲ್ಲೆಯೊಳಗೆ ಅನೇಕ ಸಹಕಾರ ಸಂಘಗಳಲ್ಲಿ ಹಣ ದುರುಪಯೋಗವಾಗಿದೆ. ಸಹಕಾರಿ ಖಾತೆಯ ಮಂತ್ರಿಗಳಿಗೆ ಈ ವಿಷಯದಲ್ಲಿ ನಾನು ಅನೇಕ ಸಾರಿ ಹೇಳಿದ್ದೇನೆ. ಒಂದು ವರ್ಷದಿಂದ ಹೇಳುತ್ತಿದ್ದೇನೆ. ರಾಯಚೂರು ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ಎಂಟು ಸಾವಿರ ರೂಪಾಯಿಗಳು ಪೋಲಾದರೂ ಇವತ್ತಿನವರೆಗೂ ವಿಚಾರಣೆ ಮಾಡಿಲ್ಲ. ಅನೇಕ ಸಹಕಾರ ಸಂಘ ಗಳಲ್ಲಿ ಆಗಿರುವುದನ್ನೂ ವಿಚಾರಿಸಿಲ್ಲ. ಸಹಕಾರ ಖಾತೆಯ ಮಂತ್ರಿಗಳ ಗಮನಕ್ಕೆ ಇದನ್ನೆಲ್ಲ ತಂದರೂ ಕೂಡ ಇವತ್ತಿನವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ.

ತಾಲ್ಲೂಕು ಅಭಿವೃದ್ಧಿ ಮಂಡಲಗಳ ಮೂಲಕ ರೈತರಿಗೆ ಬಾವಿಗಳಿಗಾಗಿ ಹಣವನ್ನು ಕೊಡುತ್ತಿದ್ದಾರೆ. ಅಲ್ಲಿ ವಶೀಲಬಾಜಿ ಹೆಚ್ಚಿದೆ. ಹಣವನ್ನು ಕೊಡುವಾಗ ನೂರಿನ್ನೂರು ರೂಪಾಯಿ ಗಳ ಲಂಚ ಹೊಡೆಯುತ್ತಾರೆ. ಹಾಗೆ ಲಂಚ ಹೊಡೆದ ಮೇಲೆ ಎರಡು ಮತ್ತು ಮೂರನೆ ಕಂತು ಗಳನ್ನೆಲ್ಲ ಒಮ್ಮೆಲೇ ಕೊಡುತ್ತಾರೆ. ಇಲ್ಲಿ ಲಂಚಕೋರತನ ಹೆಚ್ಚಾಗಿದೆ. ಇದನ್ನು ನಿವಾರಣೆ ಮಾಡುವುದಕ್ಕೆ ಹೊಣೆಗಾರರು ಯಾರು ? ಇದರ ಜವಾಬ್ದಾರಿ ಸರಕಾರದ ಮೇಲೆ ಇರುತ್ತದೆ. ಇದಕ್ಕೆ ಸರಕಾರವೇ ಹೊಣೆಗಾರರು. ಆಡಳಿತ ನಡೆಸತಕ್ಕಂಥವರು ಪರಿಶುದ್ಧವಾದ ಮನಸ್ಸಿನಿಂದ ಆಡಳಿತ ನಡೆಸಿದರೆ ವಶೀಲಬಾಜಿ ಇರಲಾರದು. ಈ ವಿಚಾರದಲ್ಲಿ ಚನ್ನಬಸವಣ್ಣನವರು ಹೇಳಿದ ಒಂದು ಮಾತು ನೆನಪಿಗೆ ಬರುತ್ತದೆ. ಅದೇನೆಂದರೆ ಹಾವಿಗೆ ಕಣ್ಣೇ ಕಿವಿಯಾಗಿರುತ್ತದೆ. ಕಣ್ಣಿನಿಂದ ನೋಡುವುದರ ಜೊತೆಗೆ ಕೇಳುವ ಕೆಲಸವನ್ನೂ ಮಾಡುತ್ತದೆ. ಅದರಂತೆ ಆಡಳಿತ ನಡೆಸತಕ್ಕಂಥವರಿಗೆ ಕಿವಿಯೇ ಕಣ್ಣಾಗಿ ಇರಬೇಕು. ಅಂದರೆ ದೇಶದಲ್ಲಿ ಭ್ರಷ್ಟಾಚಾರ ವಶೀಲಬಾಜಿ ಅನಾಚಾರ ನಡೆಯುವುದಿಲ್ಲ. ಇದರಿಂದ ನಮಗೆ ಓಟು ಸಿಕ್ಕುತ್ತದೆ, ಇಲ್ಲವೆ ಸಹಾಯವಾಗುತ್ತದೆ, ಇಲ್ಲವೆ ಅಧಿಕಾರ ದೊರೆಯುತ್ತದೆ ಎಂಬ ಮನೋಭಾವನೆ ಇಟ್ಟುಕೊಳ್ಳುವುದನ್ನು ಆಡಳಿತ ನಡೆಸತಕ್ಕಂಥವರು ಬಿಟ್ಟುಕೊಡದೇ ಇದ್ದರೆ ಭ್ರಷ್ಟಾಚಾರ ವಶೀಲಬಾಜಿ ಕಡಿಮೆಯಾಗುವುದಿಲ್ಲ. ಚೀನೀ ಆಕ್ರಮಣ ಕ್ಕಿಂತಲೂ ಹೆಚ್ಚು ಅನ್ಯಾಯ ದೇಶದಲ್ಲಿ ಇಂದು ಭ್ರಷ್ಟಾಚಾರದಿಂದ ಆಗುತ್ತಿದೆ. ಸಕಾಲದಲ್ಲಿ ಇದರ ನಿವಾರಣೆ ಮಾಡುವುದಕ್ಕೆ ಸರಕಾರ ಪ್ರಯತ್ನ ಮಾಡಿದರೆ ಸಾರ್ವಜನಿಕರು ಖಂಡಿತ ಸಹಾಯ ಮಾಡು ತ್ತಾರೆ. ಆರೋಪಣೆಗಳನ್ನು ತಿಳಿಸಿದರೆ ವಿಚಾರಣೆ ಮಾಡಿ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಈಗಾಗಲೇ ಕೆಲವು ತಿಳಿಸಿದ್ದೇನೆ. ಇನ್ನೂ ಕೆಲವು ತಿಳಿಸುತ್ತೇನೆ. ಭ್ರಷ್ಟಾಚಾರ ನಿವಾರಣೆ ಮಾಡ ಬೇಕೆಂದು ಮನವಿ ಮಾಡಿಕೊಂಡಿದ್ದೇನೆ. ಆದುದರಿಂದ ದಯವಿಟ್ಟು ಈ ನಿರ್ಣಯದಲ್ಲಿ ಸೂಚಿಸಿರುವ ಹಾಗೆ ಭ್ರಷ್ಟಾಚಾರ ನಿರ್ಮೂಲನ ಮಾಡುವುದಕ್ಕೆ ಒಂದು ಸಮಿತಿ ನೇಮಕ ಮಾಡಬೇಕೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಸನ್ಮಾನ್ಯ ಅಧ್ಯಕ್ಷಿಣಿಯರೇ, ಪ್ರಥಮ ಬಾರಿಗೆ ಈ ಸಭೆಯಲ್ಲಿ ಮಾತನಾಡಲು ನನಗೆ ಸಂತೋಷವಾಗುತ್ತದೆ. ಆಡಳಿತ ಪಕ್ಷದಲ್ಲಿಯ ಸ್ವಜನ ಪಕ್ಷಪಾತ ಭ್ರಷ್ಟಾಚಾರ ಅನಾಚಾರ ತುರುವೇಕೆರೆ ಕ್ಷೇತ್ರದಲ್ಲಿ ನಡೆದ ಮೂಲಕ ಮತ್ತು ಮಾನ್ಯ ಮಂತ್ರಿಗಳವರ ಇಂಥ ಒಂದು ಸಹಕಾರದಿಂದ ತುರುವೇಕೆರೆ ಕ್ಷೇತ್ರದಿಂದ ನಾನು ಚುನಾಯಿತನಾಗಿ ಈ ಸಭೆಯಲ್ಲಿ

(ಶ್ರೀ ಬಿ. ಬೈರಪ್ಪಾಜಿ)

ನನಗೆ ಮಾತನಾಡಲು ಅವಕಾಶವಾಯಿತು. ಅದಕ್ಕಾಗಿ ಪ್ರಥಮತಃ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಸ್ವಾಮಿ, ಸರಕಾರ ನಡೆಸುತ್ತಿರುವ ಆಡಳಿತ ಪಕ್ಷದಲ್ಲಿಯ ಸ್ವಜನ ಪಕ್ಷಪಾತ ಅನಾಚಾರ ಭ್ರಷ್ಟಾಚಾರ ಇವುಗಳ ಬಗ್ಗೆ ಅನೇಕ ನಿದರ್ಶನಗಳನ್ನು ಕೊಟ್ಟು ನಾನು ಮಾತನಾಡುವವನು ಇದ್ದೇನೆ. ಈ ಸಂದರ್ಭದಲ್ಲಿ ಹೆಚ್ಚು ಹೇಳಲು ಇಷ್ಟಪಡದೆ ಕೆಲವು ವಿಷಯಗಳನ್ನು ಮಾತ್ರ ಹೇಳಿ ಈ ನನ್ನ ಪ್ರಥಮ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಸ್ವಾಮಿ, ಇದಕ್ಕೆ ಒಂದು ಉದಾಹರಣೆ ಹೇಳಬೇಕು ಎಂದರೆ ಸಮಾಜ ಕಲ್ಯಾಣ ಖಾತೆಯಲ್ಲಿ ಅನೇಕ ರೀತಿಯಿಂದ ಸ್ವಜನ ಪಕ್ಷಪಾತ, ದುರಾಚಾರ, ಭ್ರಷ್ಟಾಚಾರ ನಡೆದು ಲಕ್ಷಗಟ್ಟಲೆ ಹಣ ದುರ್ವಿನಿಯೋಗವಾಗುತ್ತಾ ಇದೆ. ಸಮಾಜ ಕಲ್ಯಾಣ ಶಾಖೆಯನ್ನು ವಹಿಸಿಕೊಂಡಿರುವ ಮಾನ್ಯ ಸಚಿವೆಯರ ಮುಂದೆ ಇದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇದನ್ನು ನಾನು ಉಡಾಫೆಯಾಗಿ ಹೇಳುವುದಿಲ್ಲ. ನಿದರ್ಶನ ಬೇಕಾದರೆ ಕೊಟ್ಟು ಅವುಗಳನ್ನು ಶಾಬೀತ ಮಾಡಲು ಸಿದ್ಧನಿದ್ದೇನೆ. ಮನೆಗಳನ್ನು ಕಟ್ಟುವುದಕ್ಕೆ ಗ್ರಾಂಟು, ಎತ್ತುಗಳನ್ನು ಕೊಳ್ಳುವುದಕ್ಕೆ ಗ್ರಾಂಟು ಹೀಗೆ ಸಾವಿರಾರು ರೂಪಾಯಿಗಳನ್ನು ನಮ್ಮ ತುರುವೇಕೆರೆ ತಾಲ್ಲೂಕಿನಲ್ಲಿ ಜನರಿಗೆ ಕೊಟ್ಟಿದ್ದೀರಿ, ಸ್ವಜನ ಪಕ್ಷಪಾತ ದುರಾಡಳಿತ ಇವುಗಳ ಮೂಲಕ ಯಾರಿಗೆ ಈ ಹಣ ಸಲ್ಲಬೇಕೋ ಯಾರಿಗೆ ಈ ಹಣದಿಂದ ಉಪಯೋಗವಾಗಬೇಕಾಗಿತ್ತೋ ಅಂಥವರಿಗೆ ಸೇರದೆ ಕೇವಲ ಕೆಲವು ಜನ ದಳ್ಳಾಳಿಗಳ ಕೈಸೇರಿದ ಉದಾಹರಣೆಗಳಿವೆ. ದೇಶದಲ್ಲಿರುವ ಇಂಥ ಒಂದು ಭ್ರಷ್ಟಾಚಾರ ನಿರ್ಮೂಲನ ಮೊದಲು ಮಾಡಬೇಕಾಗಿದೆ. ಯಾವ ಸೊಸೈಟಿ ತೆಗೆದುಕೊಂಡರೂ ಅದರಲ್ಲಿ ತಮ್ಮವರನ್ನೇ ಸೇರಿಸಿದ್ದೀರಿ. ತಮ್ಮವರನ್ನೇ ಸೇರಿಸಿ ಗುಂಪನ್ನು ಕಟ್ಟಿಕೊಂಡಿದ್ದೀರಿ. ದಕ್ಷತೆಯಿಂದ, ನಿಸ್ಪೃಹತೆಯಿಂದ ಜನರ ಆಶೆ ಆಕಾಂಕ್ಷೆಗಳಿಗೆ ಒಳಪಟ್ಟು ಕೆಲಸಮಾಡತಕ್ಕಂಥ ಮಾನ್ಯ ಸ್ನೇಹಿತರಿಗೆ ಅಲ್ಲಿ ಅವಕಾಶವಿಲ್ಲ. ಅನೇಕ ಸೊಸೈಟಿಗಳಲ್ಲಿ ತಮ್ಮ ಗುಂಪಿನ ಜನರನ್ನೇ ಸೇರಿಸಿಕೊಂಡು ನಡೆಸುತ್ತಿರುವ ದುರಾಡಳಿತ ಹಣದ ದುರುಪಯೋಗ ಎದ್ದು ಕಾಣುತ್ತಿದೆ. ದೇಶದಲ್ಲಿ ನಡೆಯುತ್ತಿರುವ ಈ ಭ್ರಷ್ಟಾಚಾರ ನಿರ್ಮೂಲನ ಮಾಡದೇ ಹೋದರೆ ಪ್ರಜಾಪ್ರಭುತ್ವ ನಿಜವಾಗಿಯೂ ಯಾವ ಕಾಲಕ್ಕೂ ಉಳಿಯಲಾರದು ಎಂದು ಈ ಸಭೆಯ ಮುಂದೆ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಸ್ವಾಮಿ, ನಮ್ಮ ತಾಲ್ಲೂಕಿನಲ್ಲಿ ಅನೇಕ ಸೊಸೈಟಿಗಳಲ್ಲಿ ಈ ರೀತಿ ದುರ್ವ್ಯವಹಾರ ನಡೆಯುತ್ತಿರುವುದರಿಂದ ಅನೇಕ ಸೊಸೈಟಿಗಳು ಬಾಗಿಲನ್ನು ಮುಚ್ಚಿಕೊಂಡು ಇರತಕ್ಕಂಥ ದುಸ್ಥಿತಿಗೆ ಬಂದಿವೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಸಹಕಾರ ಇಲಾಖೆ ಬಗ್ಗೆ ಅನೇಕ ಸಲ ಗಮನಕ್ಕೆ ತಂದರೂ ಕೂಡ ಸ್ವಜನ ಪಕ್ಷಪಾತ ದೆಶೆಯಿಂದ ಯಾವ ಕ್ರಮ ತಗೆದುಕೊಳ್ಳದೇ ಇರುವುದರಿಂದ ಇನ್ನೂ ದುಸ್ಥಿತಿಗೆ ಇಳಿಯುತ್ತಿವೆ. ಇದಕ್ಕಾಗಿ ಸೂಕ್ತ ಏರ್ಪಾಡು ಮಾಡಿ ಕ್ರಮ ಕೈಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ಹೇಳುತ್ತೇನೆ. ನನ್ನ ಮಾನ್ಯ ಗೆಳೆಯರು ಈ ನಿರ್ಣಯ ಸಭೆಯ ಮುಂದೆ ತಂದಿದ್ದಾರೆ. ನಿಜವಾಗಿಯೂ ಕೂಡ ಈ ನಿರ್ಣಯ ದೇಶದ ಹಿತ ದೃಷ್ಟಿಯಿಂದ ಬಹಳ ಸ್ವಾಗತಾರ್ಹವಾಗಿದೆ. ಈ ನಿರ್ಣಯದಲ್ಲಿ ಹೇಳಿರುವ ಪ್ರಕಾರ ಸರಕಾರ ಕಾರ್ಯಕ್ರಮ ತೆಗೆದುಕೊಳ್ಳದೇ ಇದ್ದರೆ ದೇಶದ ಜನತೆಯ ಸ್ಥಿತಿ ಕಳವಳ ಸ್ಥಿತಿಗೆ ಬಂದೀತು. ಆದುದರಿಂದ ಮುಂಜಾಗ್ರತೆಯಿಂದ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ತಾಲ್ಲೂಕ್ ಆಫೀಸ್ ಆಗಲಿ, ಸರಕಾರದ ಯಾವದೇ ಇಲಾಖೆಯ ಆಫೀಸ್ ಆಗಲಿ ಭೇಟಿ ಕೊಟ್ಟಾಗ್ಗೆ ಗುಂಪುಗುಳಿತನ, ರಾಜಕೀಯ ಪಂಗಡಗಳ ಕುಚೇಷ್ಟೆ ಸಾರ್ವಜನಿಕರಿಗೆ ಕಂಡುಬರುತ್ತದೆ. ಸಾಮಾನ್ಯ ರೈತರ ಕೆಲಸ ಕಾರ್ಯಗಳು ಸಲೀಸಾಗಿ ನಡೆಯುತ್ತಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸ್ವಾಮಿ, ಎಲ್ಲ ದೃಷ್ಟಿಯಿಂದ ಯೋಚನೆ ಮಾಡುವುದಾದರೆ ಭ್ರಷ್ಟಾಚಾರ ಸ್ವಜನಪಕ್ಷಪಾತ ಎಲ್ಲವನ್ನೂ ನಿರ್ಮೂಲನ ಮಾಡುವುದಕ್ಕೆ ಒಂದು ಸರಿಯಾದ ಸಮಿತಿ ರಚನ ಮಾಡುವುದು ಅಗತ್ಯ. ಇಂಥ ಸಮಿತಿಯಲ್ಲಿ ವಿರೋಧ ಪಕ್ಷದವರನ್ನೂ ಆಡಳಿತ ಪಕ್ಷದವರನ್ನೂ ಸೇರಿಸುವುದು ಅಗತ್ಯ. ದೇಶದ ಹಿತದೃಷ್ಟಿಯಿಂದ ನಿಸ್ವಾರ್ಥತೆಯಿಂದ ನಿಸ್ಪೃಹತೆಯಿಂದ ಕೆಲಸ ಮಾಡತಕ್ಕಂಥವರನ್ನು ಸೇರಿಸಿ ಇಂಥ ಒಂದು ಸಮಿತಿ ರಚನೆ ಮಾಡುವುದಕ್ಕೆ ಸಹಕಾರಿಗಳಾಗಬೇಕೆಂದು ಈ ನಿರ್ಣಯವನ್ನು ಒಪ್ಪಬೇಕೆಂದು ಈ ಸಂದರ್ಭದಲ್ಲಿ ನಾನು ಸರಕಾರಕ್ಕೆ ಪ್ರಾರ್ಥಿಸುತ್ತೇನೆ.

†ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಮಾನ್ಯ ಸಭಾಧ್ಯಕ್ಷಿಣಿಯವರೇ, ದೇಶದಲ್ಲಿ ನಡೆಯುತಕ್ಕಂಥ ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಇವುಗಳನ್ನು ನಿರ್ಮೂಲನ ಮಾಡುವುದಕ್ಕೆ ಒಂದು ಸಮಿತಿ ನೇಮಕ ಮಾಡಬೇಕೆಂದು ನಮ್ಮ ಸ್ನೇಹಿತರು ಒಂದು ನಿರ್ಣಯ ಈ ಸಭೆಯ ಮುಂದೆ ಇಟ್ಟಿದ್ದಾರೆ. ದೇಶದಲ್ಲಿ ನಡೆಯತಕ್ಕಂಥ ಇಂಥಾ ಅನ್ಯಾಯಗಳನ್ನು ನಿರ್ಮೂಲನ ಮಾಡುವುದು ಇಂಥ ಒಂದು ಸಮಿತಿಯ ನೇಮಕದಿಂದ ಸಾಧ್ಯವೇ ಎಂಬುದನ್ನು ನಾವು ಮೊದಲು ಯೋಚನೆ

ಮಾಡಬೇಕು. ಈ ವಿಷಯದ ಮೇಲೆ ಮಾತನಾಡಿರತಕ್ಕಂಥ ನನ್ನ ಎಲ್ಲ ಸ್ನೇಹಿತರಲ್ಲಿ ಶ್ರೀಮಾನ್ ದೊಡ್ಡಮೇಟಿಯವರು ಶ್ರೀಮತಿ ನಾಗರತ್ನಮ್ಮನವರು ಮತ್ತು ಇನ್ನೂ ಕೆಲವು ಸದಸ್ಯರು ಬಹಳ ಉಪಯುಕ್ತವಾದ ಸಲಹೆ ಕೊಟ್ಟು ಮಾತನಾಡಿ ಇಂಥ ಒಂದು ಸಮಿತಿ ನೇಮಕದಿಂದ ಏನೂ ಅನುಕೂಲವಾಗುವುದಿಲ್ಲ ಎಂಬುದನ್ನು ಪ್ರಸ್ತಾಪ ಮಾಡಿದ್ದಾರ. ದೇಶದಲ್ಲಿ ನಡೆಯುವ ಭ್ರಷ್ಟಾಚಾರ ಸ್ವಜನ ಪಕ್ಷಪಾತ ಅನ್ಯಾಯ ಇದೆ ಎಂದು ಹೇಳುವ ಜನ ದೇಶದ ಜನತೆಗೆ ಉಪದೇಶ ಮಾಡುವುದರಿಂದ ಸಭೆಯಲ್ಲಿ ದೊಡ್ಡ ಭಾಷಣ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಸರಕಾರದ ಆಡಳಿತ ನಡೆಸತಕ್ಕಂಥ ಮಂತ್ರಿಗಳಾಗಲಿ ಯಾವದೇ ಒಬ್ಬ ಉಚ್ಚ ಅಧಿಕಾರಿಯಾಗಲಿ ಯಾವ ರೀತಿಯಲ್ಲಿ ಅಧಿಕಾರ ನಡೆಸುತ್ತಿದ್ದಾರೆ, ಪ್ರಜೆಗಳ ಹಿತದೃಷ್ಟಿಯಿಂದ ಕೆಲಸಮಾಡುತ್ತಿದ್ದಾರೆಯೇ ಎಂದು ಹೇಳುವುದನ್ನು ಭಯದಿಂದ ಆಡುತ್ತಿದ್ದಾರೆಯೇ ಎಂಬುದನ್ನು ಕಾರ್ಯತಃ ಅಗ್ನಿ ಪರೀಕ್ಷೆ ಮಾಡತಕ್ಕದ್ದು ಬಹಳ ಪ್ರಾಮುಖ್ಯವಾದುದು.

11-30. A.M.

ಯಾವ ಜನತೆಯ ಕಣ್ಣಿಗೆ ಮಣ್ಣನ್ನು ಎರಚಿ ದೊಡ್ಡದೊಡ್ಡ ಅನ್ಯಾಯಗಳನ್ನು ಮಾಡಿ— ಆತ್ಮವಂಚನೆ ಅಧಿಕಾರ ದ್ರೋಹಮಾಡುತ್ತಾರೆಯೋ ಅಂತಹವರು ನಿಜವಾಗಿಯೂ ಕೂಡ ಖಂಡನಾರ್ಹರು. ಅದಕ್ಕಿಂತ ದೇಶದ್ರೋಹ ಇನ್ನೊಂದು ಇಲ್ಲ ಎಂದು ಹೇಳಿದರೆ ಅದರಲ್ಲಿ ತಪ್ಪೇನೂ ಇಲ್ಲ. ಈಗ ಹೊಸದಾಗಿ ಸದಸ್ಯರಾಗಿ ಬಂದಿರತಕ್ಕ ಶ್ರೀಮಾನ್ ಬೈರಪ್ಪಾಜಿಯವರು ತುರುವೇಕೆರೆಯಲ್ಲಿನ ಭ್ರಷ್ಟಾಚಾರದ ವಿಷಯ ಹೇಳಿದರು, ಇದು ತುರುವೇಕೆರೆಯಲ್ಲಿ ನಡೆಯತಕ್ಕ ಭ್ರಷ್ಟಾಚಾರವಾಗಲಿ, ಚಿಕ್ಕಮಗಳೂರಿನಲ್ಲಿ ನಡೆಯತಕ್ಕ ಭ್ರಷ್ಟಾಚಾರವಾಗಲಿ, ಧಾರವಾಡದಲ್ಲಿ ನಡೆಯತಕ್ಕ ಭ್ರಷ್ಟಾಚಾರವಾಗಲಿ ಅಲ್ಲ, ಸಮಗ್ರ ಮೈಸೂರು ಹಾಗೂ ಹಿಂದೂಸ್ಥಾನದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಯೋಚನೆ ಮಾಡತಕ್ಕದ್ದು ಬಹಳ ಪ್ರಾಮುಖ್ಯವಾದ ವಿಷಯವಾಗಿದೆ. ಮಾನ್ಯ ಸ್ನೇಹಿತರು ಮಾತನಾಡುತ್ತಾ ಆಡಳಿತಪಕ್ಷ, ಕಾಂಗ್ರೆಸ್ ಪಕ್ಷ ಎನ್ನುವ ಮಾತುಗಳನ್ನು ಹೇಳುತ್ತಾ ಇದ್ದರು. ಇದು ಆಡಳಿತ ಪಕ್ಷಕ್ಕೆ ಮಾತ್ರ ಸೇರಿದ್ದು ಎಂದು ಹೇಳುವುದು ಸರಿಯಲ್ಲ ಎಂಬ ಮಾತನ್ನು ಅವರಲ್ಲಿ ಸವಿನಯದಿಂದ ಬಿನ್ನೈಸುತ್ತೇನೆ. ಈ ಜವಾಬ್ದಾರಿ ಬರೀ ಕಾಂಗ್ರೆಸ್ ಪಕ್ಷಕ್ಕೇ ಮಾತ್ರ ಸೇರಿದ್ದಲ್ಲ ಮತ್ತು ಮಾನ್ಯ ಮಂತ್ರಿಗಳದೂ ಅಲ್ಲ, ಇದು ಸಭೆಯಲ್ಲಿರತಕ್ಕ ಎಲ್ಲ ಸದಸ್ಯರಿಗೂ ಅನ್ವಯಿಸತಕ್ಕ ವಿಷಯವಾಗಿದೆ. ಶ್ರೀಮಾನ್ ರೇವಣ್ಣ ಸಿದ್ದಪ್ಪನವರು ಇವತ್ತು ನಾನು ಆಡುತ್ತಾ ಇರುವ ಮಾತು ಚುನಾವಣೆಗೆ ಸಂಬಂಧಪಟ್ಟದ್ದು ಎಂದು ತಿಳಿದುಕೊಳ್ಳಬಾರದು, ಬಹಳ ನಿಷ್ಠೆಯಿಂದ ಕೆಲಸಮಾಡತಕ್ಕ ಜನ ನಮ್ಮಲ್ಲಿ ಅನೇಕರು ಇದ್ದಾರೆ. ವರ್ಗಾವರ್ಗಿಯ ವಿಷಯದಲ್ಲಿ ಕಾಂಗ್ರೆಸ್ ಪಕ್ಷದ ಜನ ಏನು ಹೇಳುತ್ತಾರೆಯೋ ಅದೇ ರೀತಿ ತಮ್ಮ ಪಕ್ಷದ ಜನರೂ ಸಹ ಬಂದು ಹೇಳುತ್ತಾರೆ. ನಿಜವಾಗಿಯೂ ನೋಡಿದ್ದೇ ಆದರೆ ನೀವು ಕೆಲಸ ಮಾಡಿಸಿಕೊಳ್ಳುವಷ್ಟು ನಾವು ಮಾಡಿಸಿಕೊಳ್ಳುತ್ತಿಲ್ಲ ಎಂದು ಹೇಳಬಹುದು. ಏಕೆಂದರೆ ಪ್ರತಿಪಕ್ಷದ ಸದಸ್ಯರು ಬಂದು ಹೇಳುತ್ತಾ ಇದ್ದಾರೆ ಎಂದರೆ ಅವರು ಹೇಳುವುದನ್ನು ಮಾಡಿಕೊಡಬೇಕಪ್ಪಾ ಇಲ್ಲದೇ ಹೋದರೆ ನಮ್ಮನ್ನು ಟೀಕೆಗೆ ಗುರಿಮಾಡುತ್ತಾರೆ ಎಂದು ಹೇಳಿ ಮಾಡುತ್ತಾರೆ. ಅದರಲ್ಲೂ ರೇವಣ್ಣಸಿದ್ದಪ್ಪನವರು ಹೇಳಿದರಂತೂ ಅವರು ಸುಮ್ಮನೆ ಇರುವವರಲ್ಲಾ, ಏನಾದರೂ ಅನ್ನುತ್ತಾರೆ ಎಂದು ಮಂತ್ರಿಗಳಿಗೆ ಅನಿಸಿ ಒಂದಲ್ಲಾ ಒಂದು ಸಾರಿ ಆದರೂ ಅವರು ಹೇಳಿದ ಕೆಲಸ ಮಾಡಬೇಕಾಗುತ್ತದೆ. ಅದೇ ನಾನು ಹೇಳಿದರೆ ಸುಬ್ಬಮ್ಮ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು ಇವರು ಹೇಳಿದಂತೆ ಮಾಡಿದರೆ ಎಲ್ಲಾ ಕಾಂಗ್ರೆಸ್‌ನವರಿಗೇ ಮಾಡುತ್ತಾರೆ ಎಂದು ಅಂದುಕೊಳ್ಳುತ್ತಾರೆ. ಆದ್ದರಿಂದ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ ಅನೇಕ ವೇಳೆ ನಾವು ಹೇಳಿದ ಕೆಲಸಗಳು ಆಗುವುದೇ ಇಲ್ಲ. ಆದ್ದರಿಂದ ಮಾನ್ಯ ಸದಸ್ಯರು ನ್ಯಾಯ ದೊರಕತಕ್ಕ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಬೇಕೆಂಬುದನ್ನು ಅರ್ಥಮಾಡಿಕೊಳ್ಳಬೇಕು. ದೇಶದಲ್ಲಿ ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ ಅದನ್ನು ನಾವೆಲ್ಲಾ ಪ್ರತಿನಿತ್ಯವೂ ಕಣ್ಣಾರ ನೋಡುತ್ತಾ ಇದ್ದೇವೆ. ಆದರೂ ಕೂಡ ಇದನ್ನು ಒಪ್ಪಿಕೊಳ್ಳುವುದಿಲ್ಲ ಎಂದರೆ ಕಣ್ಣಿದ್ದೂ ಕುರುಡ, ಕಿವಿಯಿದ್ದೂ ಕಿವುಡ ಎನ್ನುವಂತಾಗುತ್ತದೆ. ಇದನ್ನು ಸರಿಪಡಿಸಬೇಕೇ ಹೊರತು ಒಂದು ಸಮಿತಿಯನ್ನು ನೇಮಕ ಮಾಡುವುದರಿಂದ ಈ ಕೆಲಸ ಆಗುವುದಿಲ್ಲ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಮೊನ್ನೆತಾನೆ ಶ್ರೀಮತಿ ನಾಗರತ್ನಮ್ಮನವರು ಏನು ಹೇಳಿದರು ಅದನ್ನು ನೂರಕ್ಕೆ ನೂರು ಭಾಗ ಒಪ್ಪಿಕೊಳ್ಳತಕ್ಕ ವಿಷಯವಾಗಿದೆ. ದೇಶದಲ್ಲಿ ಯಾರು ಜಾತಿವಾದ ಮಾಡುತ್ತಾ ಇದ್ದಾರೆ, ಲಂಚ ರುಷುವತ್ತು ಮಾಡುತ್ತಾ ಇದ್ದಾರೆ, ಅವರೆಲ್ಲಾ ಸುಖವಾಗಿದ್ದಾರೆ. 64ನೇ ಮಾಡಲ್ ಕಾರ್‌ನಲ್ಲಿ ತಿರುಗಾಡುತ್ತಾ ಇದ್ದಾರೆ. ಇದಾವುದನ್ನೂ ಮಾಡದೇ ನಿಷ್ಠೆಯಿಂದ ಕೆಲಸ ಮಾಡಿಕೊಂಡು ಬಂದರೂ ಕೂಡ ನನ್ನ ಕ್ಷೇತ್ರದ ಜನರಿಗೆ ಏನೂ ಮಾಡುವುದಕ್ಕೆ

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

